ಪ್ರಾಣೇಶವಿಠ್ಠಲ ಕೃತ

ಮುಯ್ಯದ ಪದ

ಸಂ. ಶ್ರೀ. ಹನುಮಂತರಾವ ಕುಲಕರ್ಣಿ
ಗೊರಾಬಾಳ
ಲಿಂಗಸೂಗೂರ

ಶ್ರೀರಾಮ.

ಮುಯ್ಯದ ಪದಕ್ಕೆ ಮೂವರಿಗೂ ಸಮನಾದ.

ಮುನ್ನುಡಿ.

೧ ಮಹನೀಯರೆ, ನಾನು ದಾಸಾರ್ಯರ ವಂಶದಲ್ಲಿ ಜನಿಸಿದೆನೆಂದು ಹೇಳಲು ನಾಚಿಕೆ ಬರುವಂತಿದೆ, ಆದರೆ ಅವರ ಅನುಗ್ರಹದಿಂದಲೇವೆ ಪೂರ್ವಾರ್ಜಿತ ಸುಕೃತದಿಂದ ಅವರ ವಂಶವಲ್ಲಿಯೇ ದೇವರು ಜನ್ಮ ಕೊಟ್ಟದ್ದಾಗಿ ಶ್ರೀ ಭಗವಂತನ ಉಪಕಾರವು ತೀರುವಂತಿಲ್ಲ. ನಾನು ದಾಸಾರ್ಯರಿಗೆ ಆರನೇ ತಲೆಯವನು.

೨ ಶ್ರೀಮತ್ಪೂಜ್ಯ ಶ್ರೀ ಪ್ರಾಣೇಶ ವಿಠ್ಠಲರು ಮಹಾತ್ಮರೂ ಅಪರೋಕ್ಷ ಜ್ಞಾನಿಗಳೂ ಎಂದು ಹೇಳಲಿಕ್ಕೆ ಎಳ್ಳಷ್ಟಾದರೂ ಸಂದೇಹವಿಲ್ಲಾ, ಅವರು ವಿರಚಿಸಿರುವ ಕೀರ್ತನಗಳಮೇಲಿಂದಲೇ ತಿಳಿದು ಬರುವದು. ಈ ಕೀರ್ತನೆಗಳು ೧೨೦-೧೩೦ ವರ್ಷಗಳಹಿಂದೆ ಅತಿ ಪುರಾತನ ಕಾಗದಮೇಲೆ ಬರೆಯಲ್ಪಟ್ಟ ವಿರುವವು. ಇವೆಲ್ಲವೂ ಬೇರೊಂದು ಕಡೆಗೆ ಇಲ್ಲ, ಸಾಂಪ್ರತ ಕೆಲವು ಮೂಲಪ್ರತಿಗಳೇ ಕಳೆದು ಹೋಗಿರುವವು. ಕೆಲವು ಜೀರ್ಣವಾಗಿರುತ್ತವೆ. ಮುಂದೆ ಅವು ದೊರೆಯುವಂತೆಯೇ ಇಲ್ಲ.

೩ ಅದು ಕಾರಣದಿಂದಲಿವೇ ಹನುಮಂತರಾವ ವಕೀಲ ಗೋರೆಬಾಳ ಈತನು ನಮ್ಮೆಲ್ಲರ ಅನುಮೋದನೆಯನ್ನು ಪಡೆದು, ದಾಸಾರ್ಯರ ಮಹಿಮೆಯು ಚಿರಕಾಲ ಇರಲೆಂದು ಸ್ಮರಿಸಿ ಜೀರ್ಣೋದ್ಧಾರ ರೂಪವಾಗಿ ಅಚ್ಚು ಹಾಕಿಸಿರುವನು. ಆತನು ತನ್ನ ಲಾಭಕ್ಕಾಗಿ ಈ ಕಾರ್ಯ ಕೈಕೊಂಡಿಲ್ಲ. ಸಜ್ಜನರಿಗೆ ಉಪಕಾರ ವಾಗಲೆಂದು ತಿಳಿದು ಈ ಸೇವಾರೂಪವಾದ ಕೆಲಸವನ್ನು ಶ್ರೀ ದಾಸರಾಯರ ಚರಣದಲ್ಲಿ ಅರ್ಪಿಸಿದ್ದಾನೆ. ಕಾರಣ ಸಕಲ ಸಜ್ಜನರೂ ಭಕ್ತಿ ಪುರಃಸರವಾಗಿ ಈ ಮಹಾ ಪ್ರಮೇಯಯುಕ್ತ ಕೀರ್ತನೆಗಳನ್ನು ಅವಶ್ಯವಾಗಿ ಸಂಗ್ರಹಿಸಬೇಕು. ಕೆಲವರು ಪ್ರಕಾಶಕನ ಭೀತಿಯಿಂದಲೂ ಕೆಲವರು ತಮ್ಮ ಔದಾರ್ಯವು ಹೊರಪಡಿಸಿ ಹೆಸರರಾಗಬೇಕೆಂತಲೂ, ಮತ್ತು ಕೆಲವರು, ಔದಾಸೀನ್ಯದಿಂದಲೂ ಸಂಗ್ರಹಿಸುವದು ಕಂಡುಬರುತ್ತಲಿದೆ, ಆದರೆ ಇದು ಪರಮಾರ್ಥ ಸಾಧನಕ್ಕೆ ಸರಿಯಾದದ್ದಲ್ಲ. ಭಕ್ತಿಯುತರಾಗಿ ಪ್ರಸ್ತಾವನೆಯಲ್ಲಿ ಬಿನ್ನೈಸಿದಂತೆ ಪೂರ್ಣ ವಿಚಾರಿಸಿ, ಇದರಲ್ಲಿದ್ದ ಸಾರವನ್ನು ಸ್ವೀಕರಿರೆಂದು ಮೂವರಿಗೂ ತಲೆಬಾಗಿ ಕಡೆಗೆ ಮೂಜಗತ್ಪತಿ ಎನಿಸಿದ ಮಧ್ವೇಶನಾದ ಮದ್ಹೃದಿಸ್ಥ ಮೂಲೇಶನಿಗೆ ಈ ಮುಯ್ಯದ ಪದದ ಮುನ್ನುಡಿಯನ್ನರ್ಪಿಸಿ ಮೂವರಿಗೂ ಸಮನಾದ ಮತಿಯನ್ನೀಯಲೆಂದು ಪ್ರಾರ್ಥಿಸುವ

ಓರ್ವ ದಾಸಾರ್ಯರ ವಂಶಸ್ಥನಾದ.

ಮುಪ್ಪುರಂಗರಾವ ಗುರಭೀಮರಾವ

ಶಾಳಾಮಾಸ್ತರ, ಕುಲಕರ್ಣಿ ಲಿಂಗಸೂಗುರ.

ಪ್ರಸ್ತಾವನೆ.

ಶ್ರೀ ರುಕ್ಮಿಣಿಸತ್ಯಾಸಮೇತ
ಶ್ರೀ ಸಂತಾನ ಗೋಪಾಲಕೃಷ್ಣಾಯ
ಮಂಗಳಂ.

ದಯಮಾಡಿ ಪೂರ್ಣ ಓದಿರಿ.

ಸಕಲ ಸಜ್ಜನ ಮಹಾಶಯರೆ! ಚರಾಚರ ಜಗತ್ತಿಗೆ ಒಡೆಯನಾದ ಪರಮಾತ್ಮನು ಭಕ್ತರುಗಳ ಉದ್ಧಾರಾರ್ಥವಾಗಿ ಕಾಲಕಾಲಗಳಲ್ಲಿ ಅವತರಿಸಿ ಚಮತ್ಕಾರ ಮತ್ತು ಮಹತ್ವವಾದ ಲೀಲೆಗಳಿಂದ ತ್ರಿವಿಧ ಜೀವರುಗಳಿಗೆ ಅವರವರ ಸ್ವಸ್ವಯೋಗ್ಯತಾ ಜ್ಞಾನವನ್ನಿತ್ತು. ತನ್ನ ಒಂದೇ ಕ್ರಿಯೆಯಿಂದ ಸರ್ವರಿಗೂ ತಕ್ಕಸಾಧನ ಮಾಡಿಸುವನು. ಇಂತಹ ಭಗವಂತನ ಲೀಲೆಗಳನ್ನು ತಿಳಿಯುವದರಲ್ಲಿ ಕವಿಗಳು ಸಹ ಮೋಹಕ್ಕೊಳಗಾಗುವರೆಂದಮೇಲೆ ನಮ್ಮಂಥ ತಾಮಸಾನ್ನವನ್ನುಂಬುವ ನರರ ಪಾಡೇನ ? ಆದಾಗ್ಯೂ ತನ್ನನುಗರಾದ ಸಕಲದೇವತೆಗಳೊಂದಿಗೆ ಅವತರಿಸಿದ ಶ್ರೀಕೃಷ್ಣ ಪರಮಾತ್ಮನು ಸಂಸಾರಿಕರಂತೆ ಈ ಸಂಸಾರದಲ್ಲಿ ವರ್ತಿಸಿದ್ದು ವಿಶ್ವಕುಟುಂಬಿಯಾದ ಆ ಮಹಾಸಂಸಾರಿಗೆ ಆಶ್ಚರ್ಯಕರವಾದ ಹೊಸವಾದ ಮಾತಲ್ಲ ! ಪ್ರಪಂಚಕ್ಕನುಸಾರವಾಗಿಯೇ ಪಾರಮಾರ್ಥಿಗಳು ದೇಶಕಾಲೋಚಿತ ಕರ್ಮಗಳನ್ನಾಚರಿಸಿ ಈ ಪ್ರಪಂಚದಲ್ಲಿಯೇ

ಪಾರಮಾರ್ಥವಿದೆ. ಬೇರೊಂದು ಕಡೆ ಇಲ್ಲವೆಂದು ಶ್ರುತಿ ಕೂಗಿಹೇಳಿದ್ದಕ್ಕೆ "यद्यदाचरति श्रेष्ठस्तत्तदेवेतरो जनः" ಎಂಬ ಗೀತೋಕ್ತಿಯಂತೆ ಲೋಕಶಿಕ್ಷಾರ್ಥವಾಗಿ ಶ್ರೀಕೃಷ್ಣ ಪರಮಾತ್ಮನು ತನ್ನ ಪ್ರಿಯಭಕ್ತರುಗಳಾದ ಪಾಂಡವರ ದ್ವಾರಾ ಸಂಸಾರಿಗಳು ಪ್ರತಿಕಾಲದಲ್ಲಿ ಆಚರಿಸಬಹುದಾದ ನಿವೃತ್ತಿಸಾಧಕ ಪ್ರವೃತ್ತಿಮಾರ್ಗವನ್ನೇ ಜಗತ್ತಿಗೆ ತೋರಿಸಿದ ನೆಂಬದಕ್ಕೆ ಧರ್ಮಾರ್ಜುನರೇ ಸಾಕ್ಷಿಯಾಗಿರುವರು. ಶ್ರೀ ಪರಮಾತ್ಮನು ತನ್ನ ಅನೇಕ ರೂಪಗಳಿಗೆ ಆತ್ಯಂತಿಕ ಅಭೇದ ವಿದ್ದರೂ ಕಾಲಕ್ಕನುಸಾರವಾಗಿ ವಿವಿಧರೂಪಗಳನ್ನೆತ್ತಿ ವಿವಿಧ ಕ್ರಿಯೆಗಳಿಂದ ವಿವಿಧಬಗೆಯಿಂದ ವಿವಿಧರಾದ ಭಕ್ತರುಗಳ ವಿವಿಧ ಸಾಧನಗಳನ್ನು ಪೂರ್ತಿಸಿರುವದು. ಶ್ರೀಕೃಷ್ಣ ಚರಿತ್ರವಿಂದ ವ್ಯಕ್ತವಾಗುತ್ತದೆ. ಈ ಅಜನ ಜನನ ಅತ್ಯಾದ್ಭುತ ಚಾರಿತ್ರ್ಯವು, ಅಬಾಲನ ಬಾಲಲೀಲೆಗಳು, ಸಂತೃಪ್ತನ ಅಸಂತೃಪ್ತತೆಯು, ಅಪ್ರಚ್ಛನ್ನನ ಪ್ರಚ್ಛನ್ನತೆಯು, ಪ್ರೌಢನ ಅಪ್ರೌಢತೆಯು, ನಿಷ್ಕಿಂಚನನ, ಕೊಂಚತೆಯು, ನಿಷ್ಕಾಮನ ಕಾಮತನವು, ನಿಷ್ಕುಟಿಲನ ಕುಟಿಲತನವು, ಸ್ವರಮಣನ ಪರರಮಣತೆಯು. ಪರಮಸಾತ್ವಿಕನ ಅಸಾತ್ವಿಕತೆಯು, ಪ್ರಬಲತನ ಅಬಲತೆಯು, ನಿರ್ಬಲೆಯರಾದ ಅಬಲೆಯರಿಗೆ ಬಲಪ್ರದಾಯಕತ್ವವೂ, ಅನಾದಿಯ ಆದ್ಯತ್ವವು, ಅಪ್ರಯೋಜಕನ ಪ್ರಯೋಜಕತ್ವವೂ ಇವೇ ಮೊದಲಾದ ಸಮಾಸವಳಿಗೆ ನಿಲುಕದ ಅನಂತಾನಂತ ಗುಣಪೂರ್ಣನಾದ, ತಾನು ಲೌಕಿಕನಲ್ಲದಿದ್ದರೂ ಲೌಕಿಕರಂತೆ ಸರ್ವಧರ್ಮಗಳನ್ನಾಚರಿಸಿ ತನ್ನ

ಅಚಿಂತ್ಯ ಮಹಿಮೆಯನ್ನು ತೋರಿಸಿದ ಮಹಾ ಲೋಕೈಕ ಲಾಕಿಕಧುರೀಣನಾದ ಶ್ರೀಕೃಷ್ಣ ಪರಮಾತ್ಮನ ಗೌಪ್ಯಚರಿತ್ರೆಯನ್ನು ಜ್ಞಾನಿಗಳಾದ ಅಜ್ಞಸ್ಥಭಕ್ತರೇ ತಿಳಿಯುವರಲ್ಲದೆ ಅನ್ಯರಿಗೆ ಇವರ ಪರಿಚಯವೆಲ್ಲಿ !

ಪೂರ್ವಕಾಲದಲ್ಲಿ ಈ ಮಹಾತ್ಮನ ಮಹಿಮೆಯನ್ನು ಕಿಂಚಿತ್ ಬಲ್ಲವರಾದ ವೇದೋಪನಿಷದರ್ಥಗಳನ್ನು ತಕ್ಕಮಟ್ಟಿಗೆ ತಿಳಿದವರಾದ ಮಹರ್ಷಿಯರು ಆ ಸಾಮಮಂಗಳ ಪ್ರದನ ಸಾಮರಸ ಸಂದು ಮಂಗಳೆಯುರಾದರು ಬರಬರುತ್ತ ಲೋಕವು ಅಂತಹ ಅಮೋಲ್ಯವಾದ ವೇದೋಪನಿಷದಾರ್ಥಗಳ ಗೂಢಾರ್ಥವನ್ನು ತಿಳಿಯದೆ ಜ್ಞಾನ ತಿರೋಹಿತವಾಗಲು ಶ್ರೀ ಪರಮಾತ್ಮನೇ ಒಂದು ರೂಪದಿಂದ ಅವತರಿಸಿ, ಸೂತ್ರ ಸೂತ್ರಾರ್ಥಗಳ ಪುರಾಣೇತಿಹಾಸಗಳದ್ವಾರಾ ಸಜ್ಜನರುಗಳ ಉದ್ಧಾರ ಮಾಡಿದನು. ಇಂತಹ ಕಾಲವೂ ಯುಗಾಂತರೇಣ ಕಾಲನಿಯಾಮಕ ಭಗವಂತನಿಂದ ಗ್ರಾಸವಾಗುತ್ತಿರಲು ಶ್ರೀ ದೇವರ ಆಜ್ಞೆಯಿಂದ ಸಾಕ್ಷಾತ್ ವಾಯುದೇವರೇ ಮತಸ್ಥಾಪಕ ಆಚಾರ್ಯರಾಗಿ ಅವತರಿಸಿ ಭಕ್ತರುಗಳ ಸಂಸಾರ, ಶರಧಿಗೆ ನೌಕಾರೂಪರಾದರು ತರುವಾಯ ಕಾಲಕ್ಕನುಸರಿಸಿ ದೇವತೆಗಳೇ ಈ ಭೂಲೋಕದಲ್ಲಿ ಅವತರಿಸಿ ಟೀಕಾಟಿಪ್ಪಣಿಗಳದ್ವಾರಾ ಲೋಕರಿಗೆ ಪ್ರಮೇಯರಹಸ್ಯ ತಿಳಿಸಿ ಮತ್ತು ಭಕ್ತ್ಯತಿಶಯಕ್ಕೆ ಮುಖ್ಯಕಾರಣವಾದ ಪರಂಪರೆಯಿಂದ ನಡೆದುಬಂದ ಸಂಗೀತಶಾಸ್ತ್ರವನ್ನು ಅನುಸರಿಸಿದ, ತಾಂಡವ (ನರ್ತನ) ವನ್ನವಲಂಬಿಸಿ ಪರಮಾತ್ಮನನ್ನು ಪ್ರಸನ್ನೀಕರಿಸಲು

ಸುಲಭವಾದ ಭಕ್ತಿಮಾರ್ಗಕ್ಕೆ ಮೊದಲನೇ ಸೋಪಾನವಾದ ದಾಸ್ಯಭಾವವನ್ನು ಪ್ರಚುರಗೊಳಿಸಿ, ದಾಸರೆಂದೆನಿಸಿ ಪರರ ಹಿತದ ಗೋಸುಗ ಎಡೆಬಿಡದೆ ಪ್ರಯತ್ನಿಸಿದರೆಂಬುದಕ್ಕೆ ಆದ್ಯ ದಾಸರಾದ ಪುರಂದರರ ಕೃತಿಯೇ ಸಾಕ್ಷಿಯಾಗಿಲ್ಲವೇ !

ಅಂತಹ ಸನಾತನವಾದ ಗೀರ್ವಾಣಭಾಷೆಯು ಕಲಿ ಪ್ರಾಬಲ್ಯದಿಂದ ದಿನದಿನಕ್ಕೆ ಸಂಕುಚಿತವಾಗಿ ನಿರಾಶ್ರಿತವಾಗಲು ದಯಾರ್ದ್ರ ಹೃದಯರಾದ ಜ್ಞಾನಿಗಳು ಸಜ್ಜನರಾದ ಭಕ್ತರ ಉದ್ಧಾರವಾಗಬೇಕೆಂದು ವೇದೋಪನಿಷದರ್ಥಗಳನ್ನು ಕನ್ನಡದಲ್ಲಿ ರಚಿಸಿದರು. ಶ್ರೀ ಪರಮಾತ್ಮನ ದಿವ್ಯ ಮಂಗಳಪ್ರದವಾದ ನಾಮಗಳು ಯಾವಭಾಷೆಯಲ್ಲಾದರೇನು ? ಭಕ್ತಿಪುರಸ್ಸರವಾಗಿ ಪಠಿಸಿದವನೇ ಧನ್ಯನು ಸಂತತವಾಗಿ ಸಕಲಕ್ರಿಯಾಗಳಲ್ಲಿ ಭಗವಂತನ ನಾಮಸಂಕೀರ್ತನವೇ ಮುಖ್ಯವಾಗಿ ಮಂಗಳಕರವು ಪರಮಾತ್ಮನ ವಿಸ್ಮೃತಿಯೇ ಅಮಂಗಳವೆಂದು ಹೇಳುವ ವೇದವಚನವು ಈ ಕಾಲಕ್ಕೆ ಪದೆಪದೆ ಸ್ಮರಣೆಗೆ ಬರುತ್ತದೆ. ಹಿಂದಿನಕಾಲದ ಜನರು ಸಕಲ ಕ್ರಿಯಾಗಳಲ್ಲಿ ಪರಮಾತ್ಮನಮೇಲೆ ವಿಶ್ವಾಸವನ್ನಿಟ್ಟು ಆಚರಿಸುತ್ತಿದ್ದರಾದ ಕಾರಣ ಸಂಸಾರದಲ್ಲಿ ಪೂರ್ಣಾಯು ಸಕಲೈಶ್ವರ್ಯ ಪುತ್ರಸಂಪತ್ತ್ಯಾದಿಗಳಿಂದ ಮಂಗಳಪ್ರದವಾದ ಸತ್ಕೀರ್ತಿಯನ್ನು ಸಂಪಾದಿಸಿ ಪಾರತ್ರಿಕದಲ್ಲಿ ಸೌಖ್ಯವನ್ನು ಹೊಂದಿದರೆಂಬುದಕ್ಕೆ ಅನೇಕ ಇತಿಹಾಸಗಳು ಇದುವರಿಗೂ ಭಕ್ತಿವಾನ್ ಜನರುಗಳ ಹೃದಯದಲ್ಲಿ ಉಸರವುಸಿರಲಕ್ಕಿಲ್ಲ! ಅದು ಕಾರಣವೇ ಈ ಪರಿಸ್ಥಿತಿಯಲ್ಲಿ

ಕಾಣಬಾರದ್ದನ್ನು ಕಣ್ಣಿಲೆ ನೋಡುವೆವು. ಹಾ ಜನ್ಮವೆ! ಇದು ಬಹು ಕಷ್ಟತರವಾದದ್ದು. ಎಲ್ಲಿನೋಡಿದಲ್ಲಿಯೂ ಅಮಂಗಲಿಯರೇ ದುರಾಚಾರಿಗಳೇ ಇಷ್ಟೇ ಏಕೆ? ನಮ್ಮಂಥ ಗೇಣುದ್ದ ಏರಿಸಿಯುಳ್ಳ ಗಂಡಸರುಗಳುಸಹ ಗಂಡಸತ್ವವರಂತೆ ಶ್ರೀರಂಗನ ಮಂಗಳಪ್ರದವಾದ ತಾಳಿಯನ್ನು ಹರಿಸುಕೊಂಡು ಮುಂಡೆಯರಾಗಿರುವೆನಲ್ಲನೇ? ಇಷ್ಟೇ ಅಲ್ಲ. ಶುಭಾಶುಭ ಕಾರ್ಯಗಳಲ್ಲಿಸಹ ಲೌಕಿಕವ್ಯಥಾ ಆಚರಣೆಗಳೆ ಪೂರತವಾಗಿ ಬೇರೂಂಟಿಲ್ಲ. ಮಾಡುವದೇನು? ಕಾಲಸಿಯಾನುಕ ಭಗವಂತನ ಚಿತ್ರ. ವಿವಾಹ ಮುಂತಾದ ಶುಭಕರ್ಯಗಳಲ್ಲಿ ಬೇಗಬೇಗರು, ಬೇಗ ಬಿಗಿತ್ತಿಯರು ರಹಸ್ಯವಾಗಿ ಬೆರೆಸುವ ಕಲಹವೆಂದರೆ ಉಭಯತರ ದುರಾಚಾರವನ್ನು ಬೈಲಿಗೆತಂದು ಮನಸಂತಾಪವನ್ನು ಹೆಚ್ಚು ಪೆಗ್ಗಳಿಸಿ ಬಾಯಿಗೆ ಬಂದಂತೆ ಬೈದಾಡುವದ, ಇದು ಮುಂದೆ ಪರಂಪರೆಯಾಗಿ ಅತಿ ಅನರ್ಥಕ್ಕೆ ಕಾರಣವಾಗಿ ಮಂಗಳಕಾರ್ಯಗಳಿಗೆ ಭಂಗವನ್ನು ತರುತ್ತಿದೆಂಬದನ್ನು ಪ್ರತಿಕಾಲಗಳಲ್ಲಿಯೂ ಕಣ್ಣಾರೆ ನೋಡಿದ್ದೇವೆ ಮತ್ತು ನೋಡುತ್ತಲಿದ್ದೇವೆ ಇದೆಲ್ಲ ಕಲಿಮಹಾರಾಜನ ಮಹಾಮಹಿಮೆಯೇ? ಇದಕ್ಕೆ ಕೆಲವರು ಆಕ್ಷೇಪಿಸಬಹುದಾದ್ದೇನಂದರೆ ಪೂರ್ವಪದ್ಧತಿ ಪರಂಪರೆಯಂತೆ ನಾವಾದರೂ ಹಾಗೆ ಮಾಡಬಹುದು. ಅದರೆ ಇದಕ್ಕೆ ವಿನಯಪೂರ್ವಕವಾಗಿ ವಿಜ್ಞಾಪಿಸುವದೇನಂದರೆ-ಪೂರ್ವಜರ ಪರಸ್ಪರಸುಹೃದ್ಭಾವ ಅಂತಃಕರುಣ ಗುರುಹಿರಿಯರಲ್ಲಿ ವಿಶ್ವಾಸ, ಪರಮಾತ್ಮನಲ್ಲಿ ಭಕ್ತಿಮುಂತಾದವುಗಳು ಈಗಿನ ನಮ್ಮ ಜನರಲ್ಲಿ

ಎಳ್ಳಷ್ಟಾದರೂ ಉಳಿದಿಲ್ಲಾದಕಾರಣದಿಂದಲೇ ಇಷ್ಟು ಹೀನ ಸ್ಥಿತಿಯು ಬಂದೊದಗಿದೆ. ಇದನ್ನೆಲ್ಲ ಅರಿತವರಾದ ಹಾಗೂ ಅಪರೋಕ್ಷಿಗಳಾದ ಶ್ರೀ ವಿಜಯದಾಸರ ಶಿಷ್ಯರಾದ ಮೊಹನ್ನ ದಾಸಾರ್ಯರು ಸಂಸಾರಿಗಳ ಕಷ್ಟವನ್ನು ದೂರಮಾಡಲೋ ಸುಗ ಅನೇಕ ವೇದೋಕ್ತಪ್ರಮೇಯ ರಹಸ್ಯವನ್ನು ತೆಗೆದು ಶ್ರೀ ದೇವರ ಸ್ತೋತ್ರಯುಕ್ತ ಸುಭದ್ರಾ ಮುಯ್ಯದ ಕಥೆ ಯನ್ನು ರಚಿಸಿರುವರು. ಇದು ಬಹು ರಹಸ್ಯವಾದದ್ದಿದ್ದು ಇನ್ನೂ ಅಚ್ಚು ಆಗಿರುವದಿಲ್ಲ. ಮುಂದೆ ಅಚ್ಚು ಹಾಕಿಸುವ ಯೋಜನೆ ಇದೆ ಇದರಂತೆ ಬ್ರಹ್ಮ ವೈವರ್ತ ಪುರಾಣೋಕ್ತ ಶ್ರೀಕೃಷ್ಣಲೀಲಾಯುಕ್ತ ಸುಭದ್ರಾ ದೇವಿಗೆ ಶ್ರೀ ರುಕ್ಮಿಣಿ ಸತ್ಯಭಾಮಾ ಪ್ರತಿ ಮುಯ್ಯವೈದ ಕಥೆಯನ್ನು ಶ್ರೀ ಜಗ ನ್ನಾಥ ದಾಸಾರ್ಯರ ಪರಮಪ್ರೀತಿಯ ಶಿಷ್ಯರೂ ಅಪರೋಕ್ಷ ಜ್ಞಾನಿಗಳೂ ಆದ ಶ್ರೀ ಪ್ರಾಣೇಶ ವಿಠ್ಠಲರು (ಲಿಂಗಸುಗೂರ) ಯೋಗೇಂದ್ರದಾಸರು ರಚಿಸಿರುವರು. ಈ ಕಥೆಯು ಬರೆಯು ಲ್ಪಟ್ಟು ಸುಮಾರು (೧೧೭) ವರ್ಷಗಳಾದವು. ಈ ಮಹನೀ ಯರು ಈ ಕಥೆಯಲ್ಲದೆ ಇನ್ನೂ ಅನೇಕ ಕೀರ್ತನಗಳನ್ನೂ, ಹರಿಕಥೆಗಳನ್ನೂ ರಚಿಸಿರುವರು. ಅವುಗಳನ್ನು ಬೇರೆ ಬೇರೆ ಯಾಗಿ ಪ್ರಿಂಟ ಮಾಡಸಲಿಕ್ಕೆ ಯತ್ನ ನಡಿಸಿದ್ದೇವೆ. ಸದ್ಯಕ್ಕೆ "ಶ್ರೀಕೃಷ್ಣ ಲೀಲಾಮೃತ" ವೆಂಬ ಹೆಸರಿನಿಂದ ಶ್ರೀಕೃಷ್ಣ ಪರಮಾತ್ಮನ (೫) ಕಥಾಗಳು. ೧ ಗಾಲವ ಚರಿತ್ರ ೨ ಕಾಲಿಯಾ ಮರ್ದನ ಕಥಾ ೩ ಬುದ್ದಿ ಬ್ರಹ್ಮನ ಕಥಾ ೪ ಭ್ರಮರ ಗೀತಾ ೫ ಗೋಪಿಕಾ ವಿಲಾಸ, ಅಚ್ಚು ಮಾಡಿಸಿ

ಲೋಕೋಪಕಾರಕ್ಕಾಗಿ ಪ್ರಚುರಗೊಳಿಸಿದೆ.

ಈ ಮುಯ್ಯದ ಪದವು ಶ್ರೀ [illegible] ಸ್ವಂತ ಹಸ್ತಾಕ್ಷರದಲ್ಲೇ ದೊರೆತದ್ದು [illegible] ನಾಗಿದೆ. ಇದರಲ್ಲಿ ಶ್ರೀ [illegible] ತ್ರನ ವಿಭೂತಿರೂಪನ [illegible] ಯರು ಪರಮ ದಯಾಳುಗಳಾದ [illegible] ಳಿಗೆ ಈ ಮುಯ್ಯದ ಪದದ [illegible] ತಮಜ್ಞಾನ ಅಂಕುರಿಸಲೆಂದು [illegible] ಶ್ರೀ ವಿಷ್ಣುಸ್ಮರಣ ಸ್ತೋತ್ರಮಾಡಿ [illegible] ಪ್ರಾರಂಭಿಸಿ ವಾಸುದೇವತ್ತ್ವದ [illegible] ಯುಯುಕ್ತ ತರತಮಾತ್ಮಕ ಸ್ತೋತ್ರಗಳ [illegible] ನಂತನನ್ನು ಕೊಂಡಾಡಿರುವರು. [illegible] ಅಪಾರವಾದ ಲೋಕಹಿತಾರ್ಥಕ್ಕೆ [illegible] ಕಥಾರೂಪವಾದ ಸ್ತೋತ್ರಮಾಲಿಕೆ [illegible] ಯಮೇಲಿಂದ ಬರೆದು [illegible] ನರುಗಳ ಸೇವಾರ್ಥವಾಗಿ ಪ್ರಕಟಿಸುವದಕ್ಕೆ [illegible] ಈ ಸೇವಾರೂಪವಾದ ಬರಹಾಗಿ [illegible] ಮುದಸ್ಮಗುರ್ವಂತರ್ಯಾಮಿ ಶ್ರೀಗುರು [illegible] ರ್ಗತ ಶ್ರೀ ವರದೇಂದ್ರ ಶ್ರೀ ರಾಘವೇಂದ್ರಗುರ್ವಂತರ್ಗತ ಭಾರತಿರಮಣ ಮುಖ್ಯ ಪ್ರಾಣ [illegible] ದ್ರನಿಗೆ ಅರ್ಪಿಸಿ ಶ್ರೀ ರುಕ್ಮಿಣಿಸತ್ಯಾಸಹಿತ ಶ್ರೀ ಸಂತಾನ

೧೯ ರಾಮನಾಚಾರ್ಯ ವಕೀಲ ಪಂಢರಪುರ

೨೦ ಹನುಮಂತಾಚಾರ್ಯ ವಕೀಲ ಚಳ್ಳಗೇರಿ ಹುಬ್ಬಳ್ಳಿ

೨೧ ಹನುಮಂತರಾವ ಕು|| ಕಪ್ಪತಾಳ

೨೨ ಕೆ. ವೆಂಕಟರಾವ ವಕೀಲ ಲಿಂಗಸೂಗೂರ

೨೩ ಚೆನ್ನಣರಾವ ವಕೀಲ ಲಿಂಗಸೂಗೂರ

೨೪ ಗಣಪ್ಪಾ ಘನಮಯ್ಯಾ ಹಿಂಗೋಲಿ ಛಾವಣಿ

೨೫ ಗೋವಿಂದರಾವ ಮುಲಗಿರರಾವ ಕು|| ಧಾರವಾಡ

೨೬ ಹರಿನಾರಾಯಣ ಹನುಮಂತಾಚಾರ್ಯ ಆದವಾನಿ

೨೭ ಪುರಾಣ ರಂಗರಾವ ಕು|| ಯಲಗಲದಿನ್ನಿ

೨೮ ಗುರಭೀಮರಾವಜಿ ಲಿಂಗಸೂಗೂರ (ಸುರಪುರ)

೨೯ ವಂಗಲಿ ಶ್ರೀನಿವಾಸರಾವ ವಕೀಲ ಮುದ್ದೇಬಿಹಾಳ

೩೦ [illegible]ರಾವ ವಕೀಲ ಮುದ್ದೇಬಿಹಾಳ

೩೧ ಗೋವಿಂದರಾವ ದೇಸಾಯಿ ಜಾಲಹಳ್ಳಿ

೩೨ ನರಸಿಂಗರಾವ ವ|| ಕರ್ಣೋಡಗಿರಿ ಉಪ್ಪಳ

೩೩ [illegible]ಾಚಾರ್ಯ ನಾಯಬಗೆಜ್ಜಲಗಟ್ಟಿ

೩೪ ಗೋವಿಂದರಾವ ಬಾಗಲಕೋಟ ಮದದಗಾರಬಂದೊ
ಬಸ್ತ ಮಹಬೂಬನಗರ

೩೫ [illegible] ವಕೀಲ ಹೈಕೋರ್ಟ ಹೈದ್ರಾಬಾದ

೩೬ ವೆಂಕೋಬರಾವ ಕು|| ಕಲ್ಲೂರ

೩೭ ಶ್ರೀ ಎನ್. ವೆಂಕಟರಮಣಾಚಾರ್ಯ ಹೆಡ್ಡಮುನಷಿ.
ಪ್ಯಾಲೇಸ ಮೈಸೂರ

೩೮ ರಂಗಾರಾವಜಿ ಮುನಸಿಫ, ಕರೂರ ಡಿ|| ತ್ರಿಚನಾಪಲ್ಲಿ

೩೯ ನರಸಿಂಹಾಚಾರ್ಯ ಜೋಶಿ ಬಳಗಾನೂರ

೪೦ ನಾರಾಯಣರಾವ ಪೆನಶನ, ಡಿಪಟಿಕಲೆಕ್ಟರ ಕಾಕನಾಡಾ
ಹೈದರಾಬಾದ

೪೧ ವೆಂಕಟ ನರಸಪ್ಪಾ ಕಃ॥ ಬಾಗಲವಾಡ ತಾ॥ ಮಾನ್ವಿ

೪೨ ರಾಮಾಚಾರ್ಯ ವಕೀಲ ಹೈಕೋರ್ಟ ಹೈದ್ರಾಬಾದ

೪೩ ರಾಘವೇಂದ್ರರಾವ ನಗದಿ ಕಾರಕೂನ ಕೊಪ್ಪಳ

೪೪ ಶ್ರೀನಿವಾಸಾಚಾರ್ಯ ಅಸ್ಪತ ಹನವು ನಾಗರ ಕಾರಕೂನ ಕರೋಡಗಿರಿ ನಾಗರಹಾಳ

೪೫ ಹನಮಂತಾಚಾರ್ಯ ಜೋಸಿ ಹುನಗುಂದ

೪೬ ಶ್ರೀನಿವಾಸರಾವ ದೇಶಪಾಂಡೆ ಗುಡಗುಂಟಿ

೪೭ ದಾದಾರಾವ ವಕೀಲ ಗುಡಗುಂಟಿ

೪೮ ವಿಠ್ಠಲರಾವ ದೇಶಪಾಂಡೆ W. P. ಬಾಗಕೋಟ

೪೯ ಸ್ವಾಮಿರಾವ ವಕೀಲ ದೇಶಪಾಂಡೆ ಮುದಗಲ್ಲ

ಬಾಗಲಕೋಟ

೫೦ ರುಕ್ಮಿಣಿಕಾಂತ ಲಕ್ಷ್ಮೀನಾರಾಯಣ ಬಾಗಲಕೋಟ
[ಬಾಲಭಕುತನಾಮಿ ಕಾಕಾ]

೫೧ ಶಾಮರಾವ ದಾತಾರ ವಕೀಲ

೫೨ V. G. ಡಾಕ್ಟರ ಬಾಡಗಂಡಿ ಬಾಗಲಕೋಟ

೫೩ ಸೀಗನಹಾಳ ಗೋವಿಂದರಾವ ರೆಂಜರ

೫೪ ಹಣಮಂತರಾವ ಸಂಜೀವರಾವಭಬ್ಬಿ ವಕೀಲ

೫೫ ಗೋವಿಂದರಾವ ಡಾಕ್ಟರ ಮಂಗಳವೇಢೇಕರ ವಿಜಾಪುರ

೫೬ ರಾಜೇರಾವ ಮಂಗಳವೇಢೇಕರ ರಿಟಾಯರ್ಡ ದಿವಾನ

೫೭ ಉಡಸೇರಾವ ಜಹಗೀರದಾರ ಬಲಕುಂದಿ

೫೮ ರಾಮರಾವ ಬಲಕುಂದಿ ವಕೀಲ ಕೊಪ್ಪಳ

||ಓಂ||

ಅನುಕ್ರಮಣಿಕಾ

ತಾರತಮ್ಯ ಸ್ತೋತ್ರಗಳು

ಮುನ್ನುಡಿ ಇತ್ಯಾದಿ ೧೬ ಪುಟ ಒಟ್ಟು ೭೨ ಪುಟ

ಪ್ರಿಂಟಿಂಗ ಸ್ವಲ್ಪ ದೋಷಗಳು ಇರುವವು. ಅವುಗಳನ್ನು ಆದಷ್ಟುಮಟ್ಟಿಗೆ ಕೈಲೆ ತಿದ್ದುವ ಸಹಾಸ ಮಾಡಿದೆ.



—*(ಶ್ರೀ ಗುರುಭ್ಯೋನಮಃ)*—

|| ಹರಿಃ ಓಂ|| ಶ್ರೀರುಕ್ಮಿಣಿ ಸತ್ಯಭಾಮಾಯವರು ಶ್ರೀ ಸುಭದ್ರಾ ಶ್ರೀದ್ರೌಪದಿ ಯವರಿಗೆ ಪ್ರೀತಿ ಮಯ್ಯ ವೈದ ಪದ ಬರಿಯುವದಕ್ಕೆ ಪ್ರಾರಂಭ ಶುಭಮಸ್ತು.

ಗಣಪತಿ ಸ್ತುತಿ.

ಶ್ರೀಗುರುಭ್ಯೋನಮಃ || ಪದ. ರಾಗ. ಮೋಹನ ಕಲ್ಯಾಣಿ ತಾಳ ಅಟ್ಟ

ಲಂಬೋದರ ಪಾಹಿ ಪಾಹೀ ಜಗದ್ಗುರು | ಶಂಭುನಂದನ ಸುರನುತ ಪಾದಾ || ಲಂಬೋದರ ಪಾಹಿ ಪಾಹೀ ಮಾಂ || ಪಲ್ಲ || ಯೋಗೀಶಾರ್ಚಿತ ಶ್ರೀ ಪಾರ್ವತಿ ಪುತ್ರನತಮಿತ್ರಾ | ಆಗ ಸಾವಾಳ್ದ ಮೂಷಕ ರೂಢಾ || ನಾಗಶಯನನ ಪಾದ ಧ್ಯಾನದಲ್ಲಿಡುನಿತ್ಯಾ | ಶ್ರೀಗಣ ಪತಿ ನಿನ್ನ ಬಲಗೊಂಬೆ|| ೧ || ಶ್ರೀವರ ಶ್ರೀರಾಮಚಂದ್ರ ಧರ್ಮ ರಾಯಾ | ದೇವೇಂದ್ರಾ ನಿನ್ನ ಪೂಜಿಸೀದಾರೋ || ಕೇವಲ ಕಲಿ ದುರ್ಯೋಧನ ಪೂಜಿಸದೆ ಕೆಟ್ಟಾ | ಶ್ರೀವಿಘ್ನೇಶ್ವರಾ ನಿನ್ನ ಬಲಗೊಂಬೆ || ೨ || ದನುಜಾರಾ ಮೋಹೀಸುವದಕೆ ಸಂಕಟ ಚೂತೀ | ಯನಿಸೀ ಪೂಜಿಸಿಕೊಂಬೆ ಖಳರಿಂದಾ || ಮುನಿವ್ಯಾಸಕೃತ ಗ್ರಂಥರ್ಥಪ ತೀಳಿದು

ಬರದಾ | ಗಣರಾಜಾ ನಿನ ಪಾದಾಬಲಗೊಂಬೆ || ೩ ||
ಕಂಬು ಚಕ್ರಾಂಕಿತಾ ಪಾಶಾಧಾರನೆರಕ್ತ । ಅಂಬರಾ
ದ್ವಯ ಭೂಷಾ ನಿರ್ದೋಷಾ || ಶಂಬರಾರಿಪುಶರಾ ವಿಜ
ತಾವೃದ್ಭವಗಾತ್ರಾ । ಅಂಬಾರಾಧಿಪ ನಿನ್ನ ಬಲಗೊಂಬೆ
(ಅಂಬೂಜಾಲಯ ಜಾನೆ ಬಲಗೊಂಬೆ) ಲಂ || ೪ || ಏಕ
ವಿಂಶತಿ ಪುಷ್ಪಾನ ಮನವೋದಕ ಪ್ರೀಯ್ಯ ನೀ ಕರುಣಿ
ಪುದೂ ಪ್ರಸನ್ನವಾನೆಂದು || ಸಾಕು ವಿಷಯ ಸುಖಾ ಸುಜ
ನಾರೋಳಾಡೀಸೊ । ಏಕಾದಃತನೆ ನಿನ್ನಬಲಗೊಂಬೆ ||೫||
ಏನು ಬೇಡುವೊದಿಲ್ಲಾ ಏನು ಮಾಡುವೊಕರ್ಮ | ಶ್ರೀನಿ
ವಾಸನೆ ಮಾಡಿಸುವನೆಂಬೊ || ಜ್ಞಾನಾವೆಯಂದ್ಯೆಂದಿಗಿರ
ಲಿತಾರಕಾಂತಾ | ಕಾನೂಜಾ ನಿನ್ನನು ಬಲಗೊಂಬೆ ||೬||
ಪ್ರಾಣಸೇವಕ ಚಾಮೀಕರ ವರ್ಣ ಗಜಮುಖ | ಪ್ರಾಣೇ
ಶಾವಿಠ್ಠಲಾನಾ ಸುಕುಮಾರಾ॥ ನೀನೊಲಿದ್ಯೆವ-ಗೆ ವಿಷ್ನವ
ಪರೀಹರೀಸುತ | ಪೋಣಿಸು ಸನ್ಮತೀ ಬಲಗೊಂಬೆ ॥ ೭ ॥
ಶ್ರೀ ಮಧ್ವೇಶಾರ್ಪಣಮಸ್ತು.

ದೇವರಸ್ತೋತ್ರ

ಶ್ರೀ ಗುರುಭ್ಯೋನಮಃ ಪದ ರಾಗ. ಶಂಕರಾಭರಣ ತಾಳ. ಆದಿ.

ಶ್ರೀರಮಣ ಶ್ರೀರಾಮಾ ನಾರಾಯಣ ತ್ರಿಧಾಮ .
ವಾರಿಜಾಂಬಕಭೂಮ । ಶ್ರೀರಂಗಧಾಮಾ || ೧ || ಲಕ್ಷ್ಮೀ
ಸಾವರಸೀಯ । ತಕ್ಕೀಸಿಬೊಮ್ಮನ || ಪೊಕ್ಕಾಳಿಂದಲಿ
ಪಡದ | ರಕ್ಕಾಸಾಧ್ವಂಸಿ ॥ ೨ || ನಿತ್ಯಾಸಿಪಿರ್ಕಾರ | ಸತ್ಯ

ಸಂಕಲ್ಪ ಪುರು ॥ ಕೌಸ್ತುಭ ನಿರ್ದೋಷ ಭಕ್ತರಾಧೀನ ॥ ೩ ॥ ಧನ್ವಿನಾಮಕ ರಾವ | ಣ ನ್ವಾಯು ಶಿಕ್ಷಕ | ಮನ್ವಾಗಾಳೊಳುತ್ತಮ | ಧನ್ವಂತ್ರಿ ರೂಪಿ ॥ ೪ ॥ ನಿನ್ನ ಪಾದಾಯುಗಳ | ವನ್ನಾಜಕೆರಗುವೆ ॥ ಘನ್ನಾ ಶಾಮಾ ದಯಾಳೂ | ಬಿನ್ನಾಪ ಕೇಳು ॥ ೫ ॥ ಶಿರಿಮುಯ್ಯ ಸೂಭದ್ರಿಮಂ | ದಿರಕೆ ವೈದಾ ಸೂಕಥಿ ಬರವೇನು ನಿರ್ವಿಘ್ನ | ಕರುಣಿಸಾಬೇಕು ॥ ೬ ॥ ಕೆಷ್ಣೀಣೀಯೊಳಗೀಕಥಿ | ಜ್ಞಾನೀಗಳು ಕೇಳ್ವಂತೆ ॥ ೭ ॥ ನೀನೊಲಿದೂ ನುಡಿಸೊ ಪ್ರಾಣೇಶ ವಿಠಲಾ ॥ ೮ ॥ ಶ್ರೀಮಧ್ವೇಶ ಕೃಷ್ಣಾರ್ಪಣ.

ಲಕ್ಷ್ಮೀಸ್ತುತಿ

ಶ್ರೀಗುರುಭ್ಯೋನಮಃ ಪದ, ರಾಗ, ಶಂಕರಾಭರಣ ತಾಳ ಆದಿ

ಮಾಯೆ ವಾಸುದೇವನಾ | ಜಾಯೆಪೊಂದಿದೆಯನ್ನ ॥ ಕಾಯೆ ನಿನ್ನವಾನೆಂದು | ತಾಯೆ ಲಕಾಯೆ ॥ ೧ ॥ ಇಂದೀರೆಸರ ಸೀಜ ಮಂದಿರೆ ನಿನ್ನಪಾದ | ಪೊಂದಿರೆ ಭವದೊಳು | ನೊಂದೀರೆ ನೀರೆ ॥ ೨ ॥ ಗುರು ಪ್ರಾಣೇಶಾ ವಿಠ್ಠಲ | ಗೆರಗೀ ನಿನ್ನ ವಂದೀಸಿ ॥ ಬಲವೆಮುಯ್ಯಾದ ಕಥಿಯಾ ಕರುಣೀಸು ಮತಿಯಾ ॥ ೩ ॥

ಬ್ರಹ್ಮದೇವರ ಸ್ತುತಿ.

ಶ್ರೀಗುರುಭ್ಯೋನಮಃ ಪದ, ರಾಗ ಶಂಕರಾಭರಣ ತಾಳ ಆದಿ

ಸರಸೀಜಾಸನವಾಣಿ | ತರುಣೀ ವಲ್ಲಭ ಕ್ಷೋಣಿ | ಗುರು ವೆಮಗುವೆನು ಪಾಣಿ | ಹರಿಪಾದದಾಣಿ ॥ ೧ ॥ ಇನ್ನೊ

ಬ್ಬರಾ ಬಲ್ಲೀನೆ | ಯನ್ನ ಸ್ವರೂಪೋದ್ಧಾರ || ರನ್ನು ಈ ಜಗದೊಳು ನೀನ್ವ್ಯೇತಿರಿಕ್ತಾ || ೨ || ಈ ಕಥಿಗೆ ಮಂಗಳ | ವಾಕರೂಣೀಸುತ್ವರ ಲೋಕಾಧೀಶ ಪ್ರಾಣೇಶ ವಿಠಲನ ದಾಸಾ || ೩ || || ೨೦ ||

ಮುಖ್ಯ ಪ್ರಾಣದೇವರ ಸ್ತುತಿ.

ಶ್ರೀಗುರುಭ್ಯೋನಮಃ ಪದ. ರಾಗ. ಶಂಕರಾಭರಣ ತಾಳ ಆದಿ.

ಅಂಜಾನೆ ತನಯಧ । ನಂಜಾಯುನಗ್ರಜ || ಕಂಜಾಕ್ಷ ಶ್ರೀಮಧ್ವ ಸಂಜಯುವಂತಾ || ೧ || ಮಾರುತಿ ನಿನ್ನಯು ಕೀರೂತಿ ಜಗದೊಳು || ಬೀರೂತಿದಕೊನಾ । ಸಾರುತೀ ನೀಗಾ || ೨ || ರಾವಣಾನೂಜಸು ಸು | ಗ್ರೀವಃ ವಿಪ್ರಾಜಾ ನಂತೆ || ಭೂವರನಂತೆ ಕಾಯೊ । ದೇವೇಂದ್ರ ಪಾಲಾ || ೨ || ಪ್ರಸ್ತುತ ಬಿನ್ನಪ | ವಿಸ್ತರಿ ಪಕೃತಿಸ । ಮಸ್ತರೂ ಕೇಳಲಿ। ಆಸ್ಥೀಯುಲಿಂದಾ || ೪ || ಪ್ರಾಣೇಶ ವಿಠ್ಠಲಾ ಪ್ರೀತಾನಾಗ ಬೇಕೀದಕೆ | ಹೀನಾವಿಷಯುಗಳಾ । ನಾನೊಲ್ಲೆ ದೇವ || ೫ || ೨೫ ||

ಸರಸ್ವತಿದೇವಿಸ್ತುತಿ

ಶ್ರೀಗುಭ್ಯೋನಮಃ ಪದ.

ಸರಸ್ವತೀ ಶ್ರೀಗಾಯತ್ರೀ | ಪರಮೇಷ್ಟೀಜೆ ಸಾವಿತ್ರೀ || ಸರುವವೇದಾತ್ಮಕೆ ಪ್ರೀತೀ | ಸರಸ್ವತಾದೇವಿ || ಪಲ್ಲ || ವಾಣೀದೇವೀಸೂವೀಣಾ || ಪಾಣಿಕಾಯೆ ಬ್ರಹ್ಮನಾ | ರಾಣಿಗರುಡಾದ್ಯಾರಾಧಿತೆ || ಜಾಣೆತವಪದಕಂಜಾ |

ರೇಣುಸೇವಿಪೆನಿತ್ಯ । ಪೋಣೇಸಾಬೇಕೆ ಸನ್ಮತಿಯಾ ॥ ೧ ॥ ಹಂಸವರೂಥೆಮಾತೆ । ಕಂಸಾರಿನಿಜಾಮಾತೆ । ಸಂಸೇವಿ ಸೂವರಾದಾತೆ ॥ ದೋಷರಹಿತೆಯುನ್ನಾ । ಆಶೀಪೂರ್ತೀಸೆ ನಿನ್ನಾ ನಾಶೇವಿಸೂವೀನೆಯುಮ್ನಾ ॥ ೨ ॥ ಶಿರಿಪ್ರಾಣೇಶಾ ವಿಠಲಾನ. ಚರಣಾಂಬೂಜಾಷಟ್ಪಾದೆ । ಕರೆವ ಮುಗಿದು ಬಿನ್ನೈಸೂವೆ ॥ ಬರವ ನುಡಿಗೆ ವಿಷ್ಣುತೆ । ಬರದಂತೆ ಪಾಲೀಸವ್ವಾ । ಕರುಣಾಸಾಗರೆ ಪವಿತ್ರೆ ॥ ೩ ॥ ೨೮ ॥

ಭಾರತಿದೇವಿ ಸ್ತುತಿ

ಶ್ರೀಗುರುಭ್ಯೋನಮಃ ಪದ. ರಾಗ. ತಾಳ ಆದಿ.

ಭಾರತೀದೇವೀ । ನಿನ್ನನುದಿನಾ । ಸಾರುವರ ಕಾಯ್ವೀ ॥ ಮಾನವಾಣನಪಾದ । ವಾರಿಜಯುಗದಲೀ । ಚಾರುಭಕುತಿ ಕೊಡುನಾರಿಶಿರೋಮಣೀ ॥ ಪಲ್ಲ ॥ ಇಂದ್ರಶೇನಳೆ । ವಿಪ್ರ ಕನ್ನಿಕೆ । ಚಂದ್ರೆ ಶ್ರೀಕಾಳೆ ॥ ನೊಂದನೆ ಬಹ ಭವ ಬಂಧನದೊಳುವೇಗಾ । ದಿಂದ ಕಾಯೆ ಕರುಣಾ ಸಿಂಧು ದ್ರೌಪದಿದೇವಿ ॥ ೧ ॥ ಮಾತೆ ಕೇಳೆಲೆ ಭವಟವಗೆ । ವೀತಿ ಹೋತ್ರಳೆ ॥ ಮಾತು ಮಾತಿಗೆ ಜಲಜಾತ ನಾಭನಸ್ತುತೀ । ಆತುಕೊಂಡಿರಲೆ ಶ್ರೀ । ಮಾತರಿಶ್ವನಾರಾಣೀ ॥ ೨ ॥ ಪತೀತ ಪಾವನೆ । ಶಿವಕನ್ಯಾಜಗ । ದ್ವಿತತೆ ಜೀವನೆ ॥ ನತಿಸಿ ಬೇಡಿಕೊಂಬೆನೆ । ಸ್ಥಿತಿಯೊಳೆಸ್ವರೂಪನೂ ವಕವನ್ನೈದಿ ಈ ಕೃತಿಗೆ ಮಂಗಳವೀಯೆ ॥ ೩ ॥ ದೋಷದೂರಳೆ । ಹರಿಭಕ್ತಿಯಲ್ಲೀ ವೋಸತೊರಳೆ ॥ ಕಾಶಿನಂದನೆಯುನ್ನ ।

ಯಾಸಬಡಿಸಪದಲೀ | ಶ್ರೀಶನ ಕಥಿಗೆ ವಿಶೇಷ ಬುದ್ಧಿಯು ನೀಯೆ || ೪ || ಮಾನ ನಿನ್ನದೆ | ಸತತ ಪೇಳ್ವಾದೇನು ಮಾಣದೇ || ಪ್ರಾಣೇಶ ವಿಠಲನಧ್ಯಾನದೊಳಿರುವಂತೆ | ಪೋಣಿಸುವದು ಮತಿ | ಬಾಣವರದನುತೆ || ೫ || ೩೩ ||

ರುದ್ರದೇವರಸ್ತುತಿ

ಶ್ರೀಗುರುಭ್ಯೋನವಮಃ ಪದ. ರಾಗ. ಕಾಂಬೋದಿ ತಾಳ ಆದಿ.

ಬಾಣವದನ ಸಲಹೋ | ನಾ ನಮಿಸುವೆ || ಬಾಣವರದ ನಿನಗೆ || ಹರಹರಬಾಣ || ಪಲ್ಲ || ಕುಧೈಷ್ಟ ಮುಖಕಂಜಾ [illegible]ವಿಅಘ | ಅ[illegible] ನವ[illegible] [illegible]ಜಾ || ನಿದ್ರರಹಿತವಿಧಿಜಾ| ಸತತಾ | ಭಗ್ರಭಕ್ತ[illegible]ಗೆಕ[illegible]ಜಾ || ೧ ||
ಗಜ[illegible]ಷಿ ಅಂಬಕನೆ | ಪಶುಪತಿ | ತ್ರಿಜಗದಿ ಪೂಜಿತನೆ ! ಹರಹರ || ಅಜಿನಾಂಬರಧರನೆ ಕರುಣಿಸೊ | ವಿಜಯೋಕ್ಷಣಶಿವನೆ || ಹರಹರ || ೨ || ಕಾಮಾದಿ ಮುಖಜನಕಾ | ಧೂರ್ಜಟಿ ಭೂಮಿಜ ವೈರಿ[illegible]ಖಾ || ಸಾಮಜರಿಪುಧನಿಕಾ| ಮಿತ್ರನೆ | ಕಾಮಿತ ಫಲದಾಯಕಾ ಹರಹರ || ೩ || ಧರಿಜರವ[illegible]ಣ[illegible]ವಾವಮಾ | ಸರ್ವದ | ಸ್ಮರಿಸುವಜನ ಪ್ರೇಮಾ || ಹರಹರ || ಗರಳನಾಶನ ಭಿ ಮಾ | ವಿಕ್ರಮ | [illegible]ಜ ಧ್ವ[illegible] [illegible]ವ[illegible] || [illegible]ಹರ || ೪ || ಘನನಿಭ ಪ್ರಾಣೇಶಾ ವಿಠಲ | ನನಂಗ ನೆನಿಪದನಿಶಾ || ಘನ ಮಹಿಮನೆ ಈಶಾ|| ಕ[illegible]ಘ[illegible] ಸದನನಾ ಕಜಪೋಷ || ಹರಹರ || ೫ || ೩೪

ಶೇಷದೇವರಸ್ತುತಿ

ಶ್ರೀಗುರುಭ್ಯೋನಮಃ ಪದ. ರಾಗ. ರೇಗುಪ್ತಿ ತಾಳ ತ್ರಿವಿಡಿ

ನೀ ಸಾಹೆಯಾಗುಯ ಮಗನುಗಾಲಾ ॥ ಶೇಷಾ ದೇವರೇ ರೊಹಿಣಿಬಾಲಾ ॥ ಪಲ್ಲ ॥ ಮೂರುತಿ ಯಲ್ಲಿ ಪುಟ್ಟಿ। ನಾರಾಯಣನ್ನ ಕೂಡಿ ॥ ಚಾರು ಬದರಿಯಲ್ಲಿ। ತೋರು ತಿಹೆನೆ ॥ ೧ ॥ ದಶರಥನ ಮಡದಿ। ಬಸುರೀಲಿ ಜನಿಸೀದಿ॥ ಕುಸುಮಾನಾಭ ನರ್ಚನೆ। ಎಸಗಿದೀಯೋ ॥ ೨ ॥ ಪ್ರದ್ಯುಮ್ನ ಪರಿಯಂಕ ರುದ್ರಾನಲಂಕಾರ ॥ ಭದ್ರಪ್ರದಾಯಕ । ಭಕ್ತಪೋಷಾ ॥ ೩ ॥ ನೀಲಾಂಬರವನ್ನುಟ್ಟ। ತಾಳಾಂಕಬಿನ್ನಪ ॥ ಲಾಲೀನೊ ನಿನ್ನವನೆಂದನಿಶಾ ॥ ೪ ॥ ಪ್ರಾಣೇಶ ವಿಠ್ಠಲಾನಾ। ಧ್ಯಾನಾದೋಳಿರುವಂತೆ ॥ ನೀ ನೊಲಿವದು ದೂರು ನೋಡವಲೆ ॥ ೫ ॥ ೪೩ ॥

ಗರುಡದೇವರಸ್ತುತಿ

ಶ್ರೀ ಗುರುಭ್ಯೋನಮಃ ಪದ. ರಾಗ. ಕನ್ನಡ ಕಾಂಬೋದಿ ತಾಳ. ಆದಿ.

ರಕ್ಷೀಸಾ ಬೇಕೆಮ್ಮಾನನುದಿನ ದಲ್ಲಿ। ಪಕ್ಷಿರಾಜನೆ ಹರೀ ಶ್ಯಂದನಾ ಸ್ವಾಮಿ ॥ ಪಲ್ಲ ॥ ಇಂದ್ರ ಲೋಕಕ್ಕೆ ಪೋಗಿ ಕಲಹ ಮಾಡಿ ಪೀಯೂಷ ತಂದಾನುಜಾರೀಗಿತ್ತಾ ಧೀರನೆ॥ ಸಿಂಧೂವೀನೊಳಗಿಪ್ಪ ಕೂರ್ಮಗಜ ಮುಂದಿಯಾ ತಿಂದು ದಕ್ಕಿಸಿ ಕೊಂಡಾ ವೀರನೇ ॥ ೧ ॥ ಪಾದಪ ಮುರಿದುವಾಲೀ ಖಿಲ್ಲ್ಯರ ಪೋಷಿಸೀ ॥ ಮೋದದಿಂದ ವರವು ಪಡಿಯೋ ॥ ಮಾಧವನಂಘ್ರಿ ಕರಕಮಲದೊಳಗೆ ಇಟ್ಟ।

ಹೇದಯಾಂಬುಧಿ ನಿನಾಗೆಣೆಯಾರೊ ‖ ೨ ‖ ಅರುಣಾ ನುಜ ಮಾತೆಯಾ ಬಯಿಕೆ ಪೂರೈಸೀದಾ| ಪರಮ ಸಮರ್ಥ ಭಕ್ತವತ್ಸಲ. ॥ ಉರಗಾಶನನೆ ನಿನ್ನ ಪ್ರಾರ್ಥಿಸುವೆನು ನಿತ್ಯ। ಹರಿಸೇವೆ ಎನಹ ಮತ್ತೊಂದೊಲ್ಲೆನೊ ।೩‖ ಪ್ಲವಗಾರ ಪಾಲೀಸೀದೆ ರಘುಜಾನಎಲಿಸೀದೆ ! ತವಕ ಬಲಿವೈದ ಮಕೂಟಾತಂದೆ ‖ ದಿವಿಜಾರ್ಗೆ ಸಾಹಾಯು ವಾದೆ ವಿಪ್ರರ ಕಾಯ್ದೆ | ಅವರಾರೇನರಿವಾಡೊ ನಿನ್ನಲೀಲೆ ‖ ೪ ‖ ಶ್ರೀನಾಥನ ಪಾದಾಬ್ಜದಲ್ಲಿ ನಿರತ ಮನಾ| ತಾನಿ ರುವಂತಾ ಗಾಲಿಖೇಚರಾ ‖ ಮೌನಿ ಕಶ್ಯಪ ಜಾತಾಲಾಲಿ ಸುವದಿನ್ನ ಮಾತಾ| ಪ್ರಾಣೇಶ ವಿಠಲಾನ ನಿಜದೂತಾ ‖ ೫ ॥ ೪೮

ಷಣ್ಮಹಿಷಿಯರಸ್ತುತಿ

ಶ್ರೀಗುರುಭ್ಯೋನಮಃ ಪದ. ರಾಗ. ತಾಳ ಏಕ.

ನಮೋ ನಮೋ ನಮೋ ಜಾಂಬವತೀ । ನಮೋ ಲಕ್ಷಣ ನೀಲಾಭದ್ರೀ ‖ ನಮೋ ನಮೋ ಶ್ರೀಮಿತ್ರವಿಂದಾ ! ನಮೋ ನಮೋ ಹೇಕಾಳಿಂದಾ ‖ ೧ ‖ ಹರಿಪ್ರಿಯಾರೂ ನೀವವ್ವಾ । ಹರಿಭಕ್ತಿ ಪಾಲೀಸಿರೆವ್ವಾ | ಹರೂಪಾವೈದಿಸಿ ರೆವ್ವ | ದುರಿತಾ ಪರಿಹರಿಸೀರೆವ್ವಾ ‖ ೨ ‖ ಘನ್ನಬುದ್ಧೀ ಪಾಲಿಸಿರೆವ್ವಾ ಯನ್ನ ಉದ್ಧರಿಸೀರೆವ್ವಾ ಬಿನ್ನಪಾವಾ ಕೇಳೀರವ್ವಾ | ಅನ್ನಿಗಾನೆನಬ್ಯಾಡಿರೆವ್ವಾ ‖ ೩ ‖ ೫೧

ಸೌಪರ್ಣೀವಾರುಣಿ ಪಾರ್ವತಿ ಸ್ತುತಿ

ಶ್ರೀಗುರುಭ್ಯೋನಮಃ ಪದ. ರಾಗ. ತಾಳ.

ತಾಯಿ ಸೌಪರ್ಣೀ ದೇವೀನೀ ಕಾಯುದೆ ಜರಿಯುಲನ್ಯರಾ| ನಾನೆಲ್ಲೀ ಕಾಣೆನೆ ಧರಿಯೊಳು || ಮನಸೀರಲೀ ಶ್ರೀ ಅರಸನಲ್ಲೇವೆ ಕೇಳು || ಪಲ್ಲ || ಕ್ಷೋಣಿಯೊಳಗೆ ಕ್ರೀಯುಸ್ತು | ರಾನೆಲ್ಲೀನೋಡೆ ನಿನ್ನಂತೆ || ಅನಾಗಾರಾ ಜನ ಮಾತೆಯಾ || ಸೇವೆಯೊಳಿದ್ದೆ | ನಾನೆಂತೂ ಮಾಡಲೆ ಸ್ತುತೀಯಾ || ೧ || ವಾರುಣೀ ಶ್ರೀರೇವತಿ | ಯಾದೂ ಪಿನಮುಸ್ಕರೀಪೆ | ನಾರಾಯಣನ ತೋರೀಸವ್ಮಾ || ದೋಷಗಳನಿ | ವಾರೀಸಿ ರಕ್ಷೀಸ ಬೇಕವ್ಮಾ || ೨ || ಶ್ರೀಸತಿ ಪಾರ್ವತೀ ದಕ್ಷಧ್ವಂಸೀ ಶುದ್ಧ ಪತೀವ್ರತೀ || ಅಷಂಣ್ಣಾಮೂಖನ ಜನನೀ || ಕಾಣೀಸು ಶ್ರೀಪ್ರಾಣೇಶಾ ವಿಠ್ಠಲಾನ ಕರೂಣೀ || ೩ || ೫೪ ||

ಇಂದ್ರನಸ್ತುತಿ

ಶ್ರೀಗುರುಭ್ಯೋನಮಃ ಪದ. ರಾಗ. ಶಂಕರಾಭರಣ ತಾಳ. ಏಕ.

ನಮೋ ನಮೋ ಶಚಿವಲ್ಲಭತೆ || ರಮೆಯು ರಮಣನಲಿ ನೀತುಮತೆ || ಪಲ್ಲ || ಹತ್ತು ಕಲ್ಪಗಳಲ್ಲಿ | ಉತ್ತಮ ಶ್ಲೋಕನ || ತತ್ವವಿಚಾರ ಮಾಡ್ದೆ ಚಿತ್ತ ಶುದ್ಧದಿ || ೧ || ಮೂರೊಂಧರ್ಧ ಕಲ್ಪ | ಚಾರು ತಪಸ್ಸು ಮಾಡಿ | ನಾರಾಯಣನ ಕಂಡ | ಸೂರಿಗವ್ಮಾ || ೨ || ಪ್ರಾಣೇಶ

ವಿಠ್ಠಲನ ನೀನೊಲಿಸೀದೆ ಪೊಗೆ ॥ ಯೊನುಂಡು ಕೋಟಿ ವತ್ಸರಾಸಾಕದಿ || ೩ || ೫೭ ||

ಕಾಮನಸ್ತುತಿ

ಶ್ರೀಗುರುಭ್ಯೋನಮಃ ಪದ, ರಾಗ, ತಾಳ,

ಶರಣು ಶರಣು ರತಿನಾಥಾ || ಸುತ | ವರ ಅನಿರುದ್ಧನ
ತಾತ || ಕರುಣಪಯೋನಿಧೆ ರುಗ್ಮಿಣಿಜಾತಾ |
ತ್ವರದಿಂಲಾಲಿಸು ಮಾತಾ ||

ಪದ || ಭರತನೆ ಸನತ್ಕುಮಾರಾ | ಸೂ | ದರುಶನ ಪರ ಮೋವಾರಾ || ಹರನಂದನನತ ಬಂಧು ಕುಮಾರಾ | ಕರಿಪಿಡಿ ಕೃಷ್ಣ ಕುಮಾರಾ ॥ ೧ ॥ ಗುರುಮೊರೆ ಇಡಲೈ ತಂದೂ | ದಿವಿ | ಜರರಿಕೆ ಮನಸಿಗೆ ತಂದೂ || ತರುಣಿಯು ಬಿನ್ನಪ ಶಿವನಲಿಬಂದು | ಶರೀರವ ಕರಗಿಸಿದೆಂದೂ || ೨ ॥ ಮಿನನ ಬಸುರೊಳು ಪೊಕ್ಕೆ | ಆ | ಮಾನವರ ಕೈಗೆ ಸಿಕ್ಕೆ ॥ ದಾನವನನ್ನು ಬಿಸುಟಿದೆ ಕುಕ್ಕೆ | ಆನೊರಣಿಸಲಿಕ್ಕೆ ದುಶಕ್ಯೆ || ೩ || ಭುವನಜ ಅಶೋಕಚೂತಾ | ಹೇ | ನವ ಮಲ್ಲಿಕುತ್ಪಲಧರಿತಾ || ಪವನ ಉಡುಗಣಪ ವಸಂತ ಮಿಳಿತಾ : ಸುವಿಶಾಲದ ಅದ್ಭುತ ಚರಿತಾ || ೪ || ಅಕಳಂಕನಂಗಮಾರಾ | ಹೇ ಮಕರಧ್ವಜ ಶುಕದೇರಾ ॥ ಅಕುಟಿಲ ಪ್ರಾಣೇಶವಿಠಲನು ದಾರಾ ಸುಕಥೆಅರುಪು ಗಂಭೀರಾ || ೫ || ೬೨ ||

ಪ್ರಾಣ ಇಂದ್ರಾಣಿ ಇಂದವಮಾನುಷೋತ್ತರ ವರಿಗೆಸ್ತುತಿ

ಶ್ರೀಗುರುಭ್ಯೋನಮಃ ಪದ. ರಾಗ. ಶಂಕರಾಭರಣ ತಾಳ. ಆದಿ

ಪ್ರಾಣಪಾಲೀಸಿಂದ್ರಾನ ರಾಣೀ ದಕ್ಷಾನೀರುದ್ರಾ || ಮಾನಿ ಸಿರತಿಮನು ಗುರುವಾ ಯಮಕೋೀಲೆ || ಮಾಸೀನಿರತಿಮನು ಗರುವಾಯು ಯಮ ಸೋಮ | ಮಾನವಿ ಭಾಸ್ಕರಗೆರ ಗಾವೆ ಕೋೀಲೆ || ೧ || ವರುಣಾ ನಾರದಾವಸ್ನಿ | ತರು ಣೀ ಪ್ರಸೂತಿ ಭೃಗು | ಸರಸೀಜಾಸಾನನ ಪುತ್ರರಾರೊ ದುಕೋೀಲೆ || ಸರಸೀಜಾಸನನ ಪುತ್ರರಾರೊಂದು ಮಂದೀ ಗಳ | ವರ ನಾವು ವಿಸ್ತರೀಸಿ ವಂದೀಪೆಕೋೀಲೆ || ೨ || ಅಂಗೀರ ಪುಲಸ್ತ್ಯ ಅತ್ರಿ | ಮಂಗಳಾಂಗ ಪುಲಹಕ್ರತು || ತುಂಗ ವಶಿಷ್ಟ ಮರೀಚಿಗೊಂದಿಪೆಕೊಲೆ || ತುಂಗ ವಶಿಷ್ಟ ಮರೀಚಿ ವಿಶ್ವಾಮಿತ್ರನೀಗೆ ಮತ್ಸ್ಯ | ಸಂಗಕಂಡ ವೈವ ಸ್ವತ ಗೊಂದಿಸುವೆ ಕೋೀಲೆ || ೩ || ನಿಋುತಿ ಪ್ರಾವಹ ಮಿತ್ರ ಗುರುಪತ್ನೀಗೆ ವಂದೀಸೂವೆ | ಕರಮುಖ ವಿಷ್ವ ಕ್ಸೇನ ಪೌಲಸ್ತ್ಯಕೊಲೆ || ಕರಮೂಖವಿಷ್ವಕ್ಸೇನ ಪೌಲಸ್ತ್ಯ | ಅಶ್ವೀನೀಗ | ಇರಳೂ ಹಗಲುನಾ ಸ್ಮರಿಸೂವೆಕೋೀಲೆ || ೪ || ಮರುತಸಾಲೊ ತಿತ್ತಂಭತ್ತು | ಗುರು ವಿಶ್ವೇದೇವಪತು ಎರಡೂ ಅಶ್ವೀನೀ ರುದ್ರಷ್ಟನ್ನೊಂದುಕೋೀಲೆ || ಎರಡೂ ಅಶ್ವೀನೀ ರುದ್ರಷ್ಠನೊಂದೂವಸುಯುಂಟು | ಎರಡಾರ ಸೂರ್ಯರೀಗೆರಗೂವೆ ಕೋೀಲೆ || ೫ || ಭಾರತೀ ಭರತಾಗೆ

ಮೂರೂ ಪಿತೃಗಳಿೀಗೆ | ಧಾರೂಣಿ ಋಭುವೀಗೆರಗುವೆ ಕೋಲೆ || ಧಾರುಣೀ ರುಭುವೀಗೆರಗೂವೆ ತೀಳೀವದು | ನೂರುಮುಂದೆಂಡೂ ಕರಸೋರು ಕೋಲೆ || ೬ || ಮೂರರೂ ಮುಂದೀ ಉಳೀದಃ ಈರ್ರೈದು ಒಂದು ಮನು ಚಾರುನಾ ಮಗಳ ವರ್ಣೀಪೆ ಕೋಲೆ || ಚಾರೂ ನಾಮುಗಳಾ ವರ್ಣೀ ಪೆದಯುವಾಾ | ಸೂರಿಗಳೆಲ್ಲಾ ಕೇಳ್ವೋದು ಕೋಲೆ || ೭|| ಸ್ವಾರೋಚೀಷೋತ್ತ ಮಾನು | ಶ್ರೀರೈವತಚಾಕ್ಷೂಷಾ | ನಾರಾಯುಣಾನ ದಾಸಸಾ ವರ್ಣದಕ್ಷಾ | ನಾರಾಯುಣಾನ ದಾಸ ಸಾವರ್ಣ ದಕ್ಷಬ್ರಹ್ಮ | ಮೂರಾರಿ ದೇವ ಧರ್ಮ ಇಂದ್ರಾಸಾವರ್ಣೀ || ೮ || ಎಂದೀವರೀ ಗೊಂದಿಸಿ | ಮುುಂದೆ ಚವನ ಋಷಿ | ನಂದಾನೊಚಿತ್ಥ್ಯ ಪಾವಾಕಾ ಧ್ರುವನಹುಷಾ || ನಂದಾನೊಚಿತ್ಥ್ಯ ಪಾವಕಾ ಧ್ರುವನ ಹುಷ ಶಶಿಬಿಂದೂ ಪ್ರಲ್ಹಾದ ಪ್ರೀಯುವ್ರತ ಗೊಂದಿಸುವೆ || ೯ || ಶಾಮಾಲಗಂಗಊಷಾ | ಸೋಮಾನ ರಾಣಿಸಂಜ್ಞ | ಧೀಮಂತ ಪರ್ಜನ್ಯಾಖ್ಯ ಸೂರ್ಯಗೆ ಕೋಲೆ || ಧೀಮಂತ ಪರ್ಜನ್ಯಾಖ್ಯ ಸೂರ್ಯಾಗೊಂದೀಸಿ ಅನ | ಭೀಮಾನೀ ಸೂರರನ್ನ ಮನದೊಳು ನೆನವೆ || ೧೦ || ಅನಳಾನಾರ ಸೀಬುಧ ಆ | ಶ್ವಿನಿ ಭಾರ್ಯಾ ಛಾಯಾಪುತ್ರ | ಶನಿಪುಷ್ಕ ರಾಜಾನೂಜ ದೇವತಿಗಳಿಗೆ | ಶನಿ ಪುಷ್ಕರ ಜಾನುಜ ಮನದೇವತೆಗಳಿಗೊಂದಿಪೆ | ಸುಪ್ರಾಣೇಶ ವಿಶಲಾನಲ್ಲೀ ರಲಿಂದೂ || ೧೧ || ಉರುವಸೀ ಮುುಖ್ಯ ಅಪ | ಸರಸ್ತ್ರೀ ಯೂಾಧೀಗೊಂದೀಸಿ | ಹರಿನಾರೀ ಯೂರ ಪಾದಕ್ಕೆರಗೂವೆ

ಕೋಳೆ || ಹರಿನಾರೀಯೂರಾ ಪಾದಕ್ಕೆರಗಿ ಪಿತೃಗಂಧರ್ವ।
ನರನಾರ ಪತಿಮನುಜೋತ್ತು ಮಂಗೊಂದೀಸುವೆ || ೧೨ ||
ಈನಿರ್ಜರಾರಾಪಾದ | ಧ್ಯಾನವನ್ನು ಮಾಡುತ್ತಾ ಪ್ರಾಣೇ
ಶವಿಠ್ಠಲಾನ | ಅನಾಥಿಯಿಂದಾ || ಪ್ರಾಣೇಶ ವಿಠ್ಠಲಾನ |
ಅನಾಭಿಯಿಂದಾ || ಪ್ರಾಣೇಶ ವಿಠ್ಠಲಾನ | ಅನಾಭಿ
ಯಿಂದ ಬಾದ ಜ್ಞಾನೀಗಾಳ ಸಂತತೀನಾ ವರ್ಣಿಸೂವೆ
|| ೧೩ || ೭೫ ||

ಶ್ರೀಗುರುಭ್ಯೋನಮಃ ॥ ಬಸರುಬಣ್ಣಿಸುವ ಧಾಟಿ ತಾಳ, ಆದಿ.

ನಾಭಿಸಂಭವಸಂತ | ತೀ ಭಕ್ತಿಂದೊರ್ಣೀಸೂವೆ || ಈಭ
ವಶರಧೀತ್ವರದಿಂದ ಕೊಳೆ || ಈ ಭವಶರಧೀ ತ್ವರದಿಂದ
ದಾಟೀಸಿ । ಶ್ರೀ ಭಾಗವತರಾ ಕೂಡೀಸಲಿ ಕೋಳೆ || ಪ ||
ವಿಧೀಜಾತಾಸನಕಾದಿ । ತಪನಂತಾರಾ ದೂರ್ವಾಸ |
ಅವರ್ಶಿಂದೆಜ್ಞಾನಾನೀಧೀಗಳ ಕೊಳೆ || ಅವರ್ಶಿಂದೆಜ್ಞಾನಾ
ನಿಧೀಯೂಗ ರೂಡಾವಾಹಾನ ಬುಧಾರೂ ಕೈವಲ್ಯಾ
ತೀರ್ಥಾರೂ ಕೋಳೆ || ೧ || ಜ್ಞಾನೇಶ ಪರತೀರ್ಥ |
ಮೌನೀಶಾ ಸತ್ಯಾಪ್ರಜ್ಞಾ | ದೀನವತ್ಸಲರೂ ಪ್ರಾಜ್ಞಾ
ತೀರ್ಥಕೊಳೆ|| ದೀನಾವತ್ಸಲರೂಪ್ರಾಜ್ಞಾಸೂತಪ್ರೋರಾಜ|
ಜ್ಞಾನೀ ಅಚ್ಯುತಾಪ್ರೇಕ್ಷರೂ ಕೋಳೆ || ೨ || ಸ್ಥಿತಿಯೊಳಗೆ
ದುರ್ಮತಾ। ವತೀಶಯಾವಾದವೆಂದು । ಸ್ತುತಿಸಾಲುಸು
ರರೂ ವೊರೆಕೇಳಿ ಕೋಳೆ || ಸ್ತುತಿಸಾಲು ಸುರರೂ

ವೊರೆಕೇಳಿ ಪಾಲಿಸೀದಾ । ಯತೀ ಶಿರೋಮಣಿಯಾ ಬಲಗೊಂಬೆ ಕೋಲೆ ॥ ೩ ॥ ಹರಿಸರ್ವೋತ್ತುಮನಲ್ಲಾ। ಬರಿದೆ ಈವಿಶ್ವಾವೆಲ್ಲಾ । ಎರಡಿಲ್ಲಾವೆಂದೂ ಪೇಳೋರು ಕೋಲೆ ॥ ಎರಡಿಲ್ಲವೆಂದೂ ಪೇಳ್ವವಾಯ್ಗಳಗೆದ್ದಾ । ಗುರು ಮಧ್ವಮುನಿಗೆನಾ । ಶರಣಂಬೆ ಕೊಲೆ ॥ ೪ ॥ ಮೂರು ದೇವರು ಸವು । ಆರೂ ಮಾತಾಳೆಂಬ । ಪೋರಾಹಾದಿಗಳಾನಯದಿಂದಾ ಸೋಲೀಸೀಪ । ಭಾರತಿಪತಿಯಾ ಬಲಗೊಂಬೆ ಕೊಲೆ ॥ ೫ ॥ ಒಂದು ಇಲ್ಲಾವು ಎಂಬೊ । ಮಂದಮತೀಯು ಮತ । ಒಂದೇ ಮಾತಿನ ಲೀಗೆಲಿದಾರು ಕೋಲೆ ॥ ಒಂದೆ ಮಾತಿನಲೀ ಗೆಲೀದಂಥಾ ಶ್ರೀಮುದಾ । ನಂದಾತೀರ್ಥರನಾ ಬಲಗೊಂಬೆ ಕೋಲೆ ॥ ೬ ॥ ನಾನಾ ದೆ ವರು ಎಂಬಾ । ಹೀನ ಮತಗಳೆಲ್ಲ । ಜಾಣೀಕೆಯಲ್ಲಿ ಗೆಲಿದರು ಕೋಲೆ । ಜಾಣೀಕೆಯಲ್ಲಿ ಗೆಲಿದಂಥಾ ಕುಲಗುರು ಪ್ರಾಣ ದೇವರಿಗೆ ಶರಣೆಂಬೆ ಕೊಲೆ ॥ ೭ ॥ ಇಲ್ಲೀ ಮಾತ್ರಾವು ಭೇದ । ಅಲ್ಲೀ ಒಂದೈಂಬೂವ । ಖುಲ್ಲಾರನೆಲ್ಲ ಮುರಿವಾರೂ ಕೋಲೆ ॥ ಖುಲ್ಲಾರನೆಲ್ಲಾ ಮುರಿವ ಸದ್ಗುರು ಪಾದ । ಪಲ್ಲವಗಳಿಗೆ ಶರಣೆಂಬೆ ಕೋಲೆ ॥ ೮ ॥ ತನುವೇನಾಸೆಂಬೂವ । ಭಣಾಗೂ ಮತಗಳೆಲ್ಲ । ವಿನಯುದಿಂದಲಿ ಗೆಲಿಪರು ಕೋಲೆ ॥ ವಿನಯುದಿಂದಲಿ ಗೆಲಿದಂಥಾ ಶ್ರೀ ಮುಧ್ವಾ । ಮುನಿಯು ಪಾದಗಳಾ ಸ್ಮರಿಸೂವೆ ಕೋಲೆ ॥ ೯ ॥ ಇಪ್ಪತ್ತೊಂದು ಕುಭಾಷ್ಯ । ತಪ್ಪಾನೆಸೋಲೀಸೀದಾ । ಸರ್ಪಶಯನನ

ಒಲಿಸೀದ ಕೋಲೆ ‖ ಸರ್ಪಶಯನನ ಒಲಿಸೀದ ಗುರು
ಗಳ । ತಪ್ಪದೆ ನೆನವೇನನುದೀನ ಕೋಲೆ ‖ ೧೦ ‖ ಈ
ತನ ಮಹಿಮೆಯ । ಭೂತ ನಾಥನರೀಯ । ನಾ
ತುತೀಸುವೆನೆ ಕಡೆಗಂಡು ಕೋಲೆ ‖ ನಾತುತೀಸುವೆನೆ
ಕಡೆಗಂಡು ಪುರುತನ । ಮಾತುಮಾತೀಗೆ ಸ್ಮರಿಸೀರೊ
ಕೋಲೆ ‖ ೧೧ ‖ ನರುವ ಕರ್ಮವ ಮಾಡೆ ಪುರುತಾಂ
ತರ್ಗತನೆಂದು । ಹರಿಗರ್ಪಿಸವಲೆ ಮುದದಿಂದ ಕೋಲೆ ‖
ಹರಿಗರ್ಪಿಸವಲೆ ಮುದದಿಂದಲೀರೂಪಾರು । ನಿಂಯು
ಭಾಗಿಗಳೂ ತಿಳಿವದು ಕೋಲೆ ‖ ೧೨ ‖ ಈನಮ್ಮ
ಗುರುಮುಚ್ಚಾದೇನೂ ಸಾಧನ ಮಾಡಿ । ಪ್ರಾಣೇಶ ವಿಠ
ಲಾನೊಲೀಸೋರಾ ಕೋಲೆ ‖ ಪ್ರಾಣೇಶವಿಠ್ಠಲ ನೊಲಿಸೂ
ವಂಥ ಜಾಣರ । ನಾನೆಲ್ಲಿ ಕಾಣೇ ಜಗದೋಳು ಕೋಲೆ
‖ ೧೩ ‖ ೮೮ ‖

ಶ್ರೀಗುರುಧ್ಯಾನವು: ಪದ. ರಾಗ. ಭೈರವಿ ತಾಳ ಅಟ್ಟ.

ಗುರುಗಳ ನನುದಿನವೆನಾ । ದುರಿತಪಟ್ಟಿಳಿಸಾರೆ ಬಂದೀ
ತಿನ್ನೀನಾ ‖ ಪಲ್ಲ ‖ ಪಾರ್ಥ ರಕ್ಷಕನಪೇ । ಪಾರ್ಥ ಖಳರ
ಕೊಂದು ‖ ಕೀರ್ತಿ ಪಡದ ಸುಖ । ತೀರ್ಥರೆಂತೆಂಬಾ
‖ ೧ ‖ ನೀ ಪಾಲೀಸೆಂದೆನಲಾಪತ್ತು ಬಿಡಿಸುವ ‖ ಮಾಪ
ತಿಸಿಜಪೂತ । ಶ್ರೀ ಪದ್ಮನಾಭಾ ‖ ೨ ‖ ಕರಿಪತಿ ಬಳಿ
ಯಿಂದ । ಧರಿಜ ಪತಿಯ ತಂಪು ‖ ಗುರುಗಾಳಿಗಿತ್ತೀಹ
ನರಹರಿ ತೀರ್ಥಾ ‖ ೩ ‖ ಬಾದರಾಯಣ ದಿವ್ಯ । ಪಾದ

ಜಲಜ ಭೃಂಗ || ಭೂದೇವವಂದಿತ | ಮಾಧವ ತೀರ್ಥಾ || ೪ || ಇಕ್ಷುಚಾಪನ ಮ್ಯಾಳ । ಲಕ್ಷಿಇಲ್ಲದೆ ಬಲು || ಪೇಕ್ಷವ ಮಾಡಿದ | ಅಕ್ಷೋಭ್ಯ ಮುನಿಪಾ || ೫ || ದಯ ಮಾಡಿರೆಂದುವ | ನಯದಿಂದ ಭಜಿಪರ || ಬಯಕೆ ಪೂರೈಸುವ ! ಜಯತೀರ್ಥರೆಂಬಾ || ೬ || ಅಸ್ವೈತಗಜ ಸಿಂಹ | ಮಧ್ವಮತೋದ್ಭವ || ಸದ್ವೈಷ್ಣವ ಪ್ರಿಯ | ವಿದ್ಯಾಧಿರಾಜಾ || ೭ || ಸಂದೇಹವಿಲ್ಲದೇ ವಂದಿಪ ಜನ ರಾಸೆ || ತಂದು ಕೊಡುವ ದಯ | ಸಿಂಧು ಕವೀಂದ್ರಾ || ೮ || ರಾಗಾದಿ ವರ್ಜಿತ | ಭಾಗವತರ ಪಾಲ || ಯೋಗೀ ಶಿರೋಮಣಿ । ವಾಗೀಶ ಮುನಿಪಾ || ೯ || ಸಾರಿದ ಭಕ್ತರ | ಘೋರಪ ಅಘಗಳ || ದೂರ ಓಡಿಸುತಿಪ್ಪ | ಶ್ರೀರಾಮಚಂದ್ರಾ || ೧೦ || ಕುಭವದೊಳಿರುವಾರ । ಸೊಬಗಿನಿಂದಲಿ ನೋಡಿ || ಅಭಯವಕೊಡು ತಿಪ್ಪ | ವಿಬುಧೇಂದ್ರ ತೀರ್ಥಾ || ೧೧ || ಭ್ರಾಮಕಜನಶಿಕ್ಷ | ಧೀಮಂತ ಜನಪಕ್ಷ || ಹೇಮವರ್ಣಾಂಗಜಿ | ತಾಮಿತ್ರ ಮುನಿಪಾ || ೧೨ || ಬಗೆ ಬಗೆ ಭಜಿಸಲು । ಇಗಡ ಜನರನೊಲ್ಲ || ಬಗಿವಾನು ಸುಜನರ | ರಘುನಂದನಾರ್ಯ || ೧೩ || ಪೊಂದಿದವರನೋಯು ದಂದದಿಸಲಹುವ || ಎಂದ್ಯೆಂದು ಬಿಡ ಶ್ರೀಸು ! ರಿಂದ್ರಾಖ್ಯ ಮುನಿಪಾ || ೧೪ || ನಿಜಭಕ್ತಿಯುಲಿಪಾದ | ಭಜಿಸೂವ ಅಗಣೀತ || ಸುಜನರ ಸಲಹುವ | ವಿಜಯಿಂದ್ರ ಮುನಿಪಾ || ೧೫ || ವೇಂದ್ರ ವಾಹನಯಾದ । ವೇಂದ್ರಾಂಘ್ರಿ ಭಜಿಸೂವ । ಸಾಂದ್ರ ಭಕ

ಯುಲಿಸು । ಧೀಂದ್ರಾಬ್ಧಿ ಸುನಿಸಾ ॥ ೧೬ ॥ ಫಾರುಣೆ
ಯೊಳಗತಿ । ಚಾರು ಬೃಂದಾವನ । ಬಿರಾಜಿಸುತಿಪ್ಪ ।
ಶ್ರೀ ರಾಘವೇಂದ್ರ । ೧೭ । [illegible] ಗುರುಸುಧಿ
ವಾಗಧರಿಪ್ರದಾನ ॥ ರಾಘವೇಂದ್ರ ಪುತ್ರ । ಯೋಗೀಂದ್ರ
ಪ್ರತಿಥಾರ ॥ ೧೮ ॥ [illegible] ಗುಣದಿಂದ । ಸುಜ[illegible]
ಯುಂದವಿ ॥ ತೋರುವರಸುಧೀನ । ಸೂರೀಂದ್ರ ತೀರ್ಥ
॥ ೧೯ ॥ ಕುಮತವೆಂಬ ಗಜೇಂದ್ರ । ತ್ರಿಪುರ [illegible]
ಕಮಲಾಪ್ತ ಸಂತೀರ್ಥ । ಸುಮತೀಂದ್ರ ತೀರ್ಥ ॥ ೨೦ ॥
ಸಲ್ಲಾಪ ಸುಖಗಳ । [illegible] । ಸಜ್ಜನ
ಭಜಿಸಾಲು । ಬಲ್ಲ ಉಪೇಂದ್ರ ॥ ೨೧ ॥ ವೋದವಸಿ
ಮತವ । ವೋದಧಿ ಚಂದ್ರನ । [illegible]
ವಾದೀಂದ್ರ ತೀರ್ಥ ॥ ೨೨ ॥ [illegible]
ವಸುಧ [illegible] ಸಹ
ಧೀಂದ್ರತೀರ್ಥ ॥ ೨೩ ॥ [illegible]
ವಿಗತ ಕಲ್ಮಷ ॥ [illegible]
ಭೂಪ ॥ ೨೪ ॥ [illegible]
ಯಿಪ ॥ ಕವಿ [illegible] ಭುವನೇಂದ್ರ ತೀರ್ಥ
॥ ೨೫ ॥ [illegible]
ನ್ನ [illegible] ಸುಬೋಧೇಂದ್ರ [illegible] ॥
[illegible] । [illegible] । ಈ [illegible]
ಗುರುಗಳ ಧ್ಯಾನ [illegible] ॥ ೨೭ ॥

ವ್ಯಾಸರಾಯ ಮತ್ತು ಉತ್ತರಾದಿಮಠದ ಪೀಳಗಿ.

ಶ್ರೀಗುರುಭ್ಯೋನಮಃ ಪದ. ರಾಗ. ಭೈರವಿ ಅಷ್ಟ ತಾಳ

ಗುರುಗಳ ಪದಕಂಜಾ । ಸ್ಮರಿಸೂವೆ ನಿತ್ಯಾ ॥ ದುರಿತೌ
ಘಗಳನು ಓಡಿಸುವೆ ಸತ್ತತ್ತಾ ॥ ಪಲ್ಲ ॥ ರಾಜೇಂದ್ರ ತಪೋ
ನಿಧಿ । ಶ್ರೀ ಜಯಧ್ವಜತೀರ್ಥ ॥ ರಾಜಿತ ಪುರುಷೋತ್ತ
ಬ್ರಹ್ಮಣ್ಯತೀರ್ಥಾ ॥ ೧ ॥ ಮಧ್ವಸಿದ್ಧಾಂತ ಸ್ಥಾಪಕ ವ್ಯಾಸ
ರಾಯ ಪ್ರ ॥ ಸಿದ್ಧ ಶ್ರೀನಿವಾಸ ಶ್ರೀ ಲಕ್ಷ್ಮೀಕಾಂತಾ ॥೨॥
ಬಲ್ಲಿದ ಶ್ರೀಪತಿ ರಾಮಚಂದ್ರ ಲಕ್ಷ್ಮೀ ॥ ವಲ್ಲಭ ಶ್ರೀ
ಲಕ್ಷ್ಮೀನಾಥರೆಂತೆಂಬಾ ॥ ೩ ॥ ಶ್ರೀಲಕ್ಷ್ಮೀಪತಿ ತೀರ್ಥ
ಲಕ್ಷ್ಮೀ ನಾರಾಯಣ ॥ ನೀಲೇಶ ಭಜಕರು ಶ್ರೀನಾಥ
ತೀರ್ಥ ॥ ೪ ॥ ರಘುನಾಥ ಜಗನ್ನಾಥ ಶ್ರೀನಾಥ ಕರಜಾತ॥
ಸುಗುಣ ವಿದ್ಯಾನಾಥ ಶ್ರೀ ವಿದ್ಯಾಪತಿಯಾ ॥ ೫ ॥ ಶ್ರೀ
ವಿದ್ಯಾನಿಧಿ ರಘುನಾಥ ಶ್ರೀ ರಘುವರ್ಯ ॥ ಕೋವಿದವಿ
ನುತ ರಘೋತ್ತಮನು ತೀರ್ಥ ॥ ೬ ॥ ವ್ಯಾಸ ವಿದ್ಯಾಪತಿ
ವಿದ್ಯಾಧೀಶಾ ತೀರ್ಥ ॥ ಶ್ರೀ ಸತ್ಯವೃತರ ಶ್ರೀ ಸತ್ಯನಿಧಿ
ಗಳಾ ॥ ೭ ॥ ಗುರುಸತ್ಯನಾಥ ಶ್ರೀ ಸತ್ಯಾಭಿನವ ತೀರ್ಥ॥
ವರಸತ್ಯಪೂರ್ಣ ಶ್ರೀ ಸತ್ಯವಿಜಯರಾ ॥ ೮ ॥ ಸತ್ಯ
ಪ್ರಿಯರ ಸತ್ಯಬೋಧ ಸತ್ಯಸಂಧ ॥ ಸತ್ಯವರರ ಸತ್ಯ
ಧರ್ಮಾಖ್ಯ ಮುನಿಪಾ ॥ ೯ ॥ ಈ ನಮ್ಮ ಗುರುಗಾಳ ।
ಅನುದಿನ ಸ್ಮರಿಸೂತ ॥, ಪ್ರಾಣೇಶ ವಿಠಲಾನ ಕರುಣಾವ
ಪಡೆವೆ ॥ ೧೦ ॥ ೧೫ ॥

ಶ್ರೀ ತುಲಸೀ ಸ್ತುತಿ

ಶ್ರೀಗುರುಭ್ಯೋನಮಃ ಪದ. ರಾಗ. ತೋಡಿ ಆದಿ.
ಕಾಯಂಬರಿಯುಯುನ್ನಾ | ಮುಖ್ಯಪ್ರಾಣರಾಯರನ್ನಾ ಎಂಬ ಪದದ ಧಾಟಿ
ನಮೊ | ನಮೊ | ಶ್ರೀತುಲಸೀ | ಪಾಹಿಪಾಹಿ | ಕುಮತಿಯ
ಪರಿಹರಿಸೀ | ಅಮಿತ ಮಹಿಮೆ ಸದ್ಗುಣಗಣ ಪೂರ್ಣೆ ಸು|
ಕಮಲೇಕ್ಷಣ ಮಧುಸೂದನನರಸೀ || ಪಲ್ಲ || ಅಂದಿನಕಾಲ
ಲೀ | ಹರಿಪದ | ವಂದಿಸಿ ಭಕುತಿಯಲೀ || ಅಂದದಿವರ
ಪಡದಿಂದಿಗು ಸರ್ವರ | ಮಂದಿರದೊಳಗಿದೆ ಪೂಜೆಯ
ಗೊಳುತಲಿ ೧ || ಧನುವಂತರಿನಯನಾ | ದಿಂದಿಳಿ | ದೊ
ನಜೆ ಜಲಂಧರನಾ || ಲಲನಿಯ ಉದ್ಧರಿಸಿದ ಪಾವನತರೆ|
..ಗಸದಳ ವರ್ಣಿಸೆ ನಿನ್ನಗುಣಾ || ೨ || ನಾ ನಂಬಿದೆ
ನಿನ್ನಾ || ದೇವತ | ಮಾನಿನಿ ಮಣಿಯನ್ನಾ || ಓನತೆಯ
ಣಿಸದೆ ಕರುಣಿಸಿ ಸರ್ವದ | ಪ್ರಾಣೇಶ ವಿಠಲನ ಧ್ಯಾನ
ದೊಳಿರಿಸೆ || ೩ || ೧೨೮ ||

ಭಾಗೀರಥಿ ಸ್ತುತಿ.

ಶ್ರೀಗುರುಭ್ಯೋನಮಃ ಪದ. ರಾಗ. ಮೋಹನಕಲ್ಯಾಣಿ ತಾಳ ಅಟ್ಟ
ಭಾಗೀರಥಿ ದೇವಿ ನಮೊ| ನಮೋ ಭಾಗೀರಥೀ ದೇವಿಭಯ
ನಿವಾರಣಗಂಗೆ | ಸಾಗರನಧಾರಂಗೆ ಸುತರಂಗೆ || ಪಲ್ಲ ||
ವಾಮನ ವಾಮಪಾದಾಂಗುಷ್ಟ ನಖಸೋಕಿ | ಆ ಮಹ
ಬ್ರಂಹ್ಮಾಂಡ ಸೀಳಾಲೂಭಾಗಿ || ತಾಮರಸ ಜಲೋಕಕ್ಕಿ

ಳಿದ. ಮಜ್ಜನವಾಗೆ | ಸ್ವಾಮಿಾ ಪಾದೋದಕವೆನಿಸಿದೆ ||೧|| ಹರಿಪಾದ ಜಲದೊರಕುವದು ದುರ್ಲಭವೆಂದು | ಹರ ಪ್ರಾರ್ಥಿಸಲು ಜಡಿಪೋಳು ನಿಂದೆ || ಭಾಗೀ || ವೊರೆಯಿಡೆ ದೇವತಿಗಳಿಗೆ ವಲಿದು ಬಾವು | ಸುರನದಿಯೆಂದು ಕರಸಿ ಕೊಂಡೆ || ೨ || ಚನ್ನಾಗಿ ಸ್ವರ್ಗದೊಳಗೆ ನಿಂತ ಕಾರಣಾ || ಸ್ವರ್ನದಿಯೆಂದು ಕರಸಿದೆವ್ವಾ || ಭಾಗೀ || ಉನ್ನತ ಧೃವ ಮಂಡಲಕೆ ಪೋಗಿ ಮುಟ್ಟಿದೆ | ನಿನ್ನ ಕಾಶ ಗಂಗೆಯ ಂಬೋರೆ || ೩ || ಭಗಿರಥ ಬಹುಕಾಲ ಪ್ರಾರ್ಥಿಸೆ ಕರುಣದಿಂ | ಜಿಗಳಿ ಹೇಮಾದ್ರೀಗೆ ನಡೆತಂದೆ || ಭಾಗೀ || ಸೊಗಸೀಲಿಂತ್ರಿಪಥಾಗಿ ದಕ್ಷಿಣದಲಿ ಬಂದು | ಸಗರರಾಯನ ಉದ್ಧರಿಸೀದೆ || ೪ || ತವಕದಿಂದಲಿ ಜನ್ಹು ಋಷಿಯಲ್ಲಿ ಜನಿಸೆ ಜಾನ್ಹವಿಯೆಂದು ಸ್ತುತಿಸೋರೆ ಸುರರೆಲ್ಲಾ || ಭಾಗೀ || ಭುವನದೊಳೆಲ್ಲಾರ ಪುನಿತರಾಗೋದು ಸಿದ್ಧ | ತವಪಾದ ಸ್ಮೃತಿ ಮಾತ್ರದಿಂದಲೀ || ೫ || ನಂದೀನಿ ನಳಿನಿಸೀತಾ ಮಾಲತೀ ಮಲಹ | ಮಂದಾಧರಪದಿ ಶ್ರೀಗಂಗೆ || ಭಾಗೀ || ಸುಂದರ ತ್ರಿಪಥ ಭಾಗೀರಥಿ ಭೋಗವತಿ | ವಂದೆಜಾನ್ಹವಿ ತ್ರಿದಶೇಶ್ವರೀ || ೬ || ವಸುಗಾಳ ಮಾತು ಲಾಲಿಸಿ ರಾಯ ನಲಿಬಂದು | ಬಸುರಿಂದ ಪಡದು ಉದ್ಧರಿಸೀದೆ || ಭಾಗೀ || ಅಸಂಖ್ಯ ಕರ್ಮವ್ರಾತಕೆಂದೆನಲು ಕುಮಾರನಾ ಕೊಸರೂ ತಾ ನಿಜರೂಪ ವೈದೀವೆ || ೭ || ನಮೊ ನಮೋ ಶುಭ ಗಾತ್ರೆ ನಮೊ ನಮೋ ಸುಚರಿತ್ರೆ ; ನಮೊ ನಮೋ ಶಂತನುವಿನಮಿತ್ರೆ || ಭಾಗೀ || ಶಮದ ಮಾದಿಗಳಿಗಿತ್ತು ಪೊರೆ

ಅನುದಿನದಲ್ಲಿ | ಅವ ರವಿಸುತಪಾದ ಪಂಕಜ ‖ ೮ ‖ ಕಾಣಾಲು ಪಾಪ ಹರವು ಮುಕ್ತಿ ಆಹದು | ಸ್ನಾನದ ಫಲವು ಬಲ್ಲವರಿಲ್ಲಾ ‖ ಭಾಗೀ ॥ ಕೆಷ್ಣೇಣೀಯ ಮ್ಯಾಲ್ಪ ಸರಿದ್ವರೆನಿಸೂವೆ ‖ ಪ್ರಾಣೇಶ ವಿಠಲಾನ ದಯದಿಂದಾ ‖ ೯ ‖ ೧೩೭ ‖

ಸಮಸ್ತ ನದಿಗಳ ಸ್ತುತಿ

ಶ್ರೀ ಗುರುಭ್ಯೋನಮಃ ಪದ, ರಾಗ, ಸಾವೇರಿ ತಾಳ ಆದಿ

ಸ್ಮರಿಸುವೆನನುದೀನ ಮುದದಿಂದ ' ಈ ಧರಿಯ ಮ್ಯಾಲುಳ್ಳ ಮಹಾ ನದಿಗಳ ‖ ಪಲ್ಲ ‖ ಗೌತುಮನಘ ಪರಿಹಾರ ಮಾಡೀದ ಗೋದಾ ' ಮಾತೆ ಶ್ರೀಕೃಷ್ಣವೇಣೀ ಸರಸ್ವತೀ‖ ಆ ತರೂವಾಯು ಶ್ರೀ ಕಾವೇರಿ ಸರಯು ಶ್ರೀ ಯಮುನಾ| ಧೌತಪಾತಕೆ ಶ್ರೀ ನರ್ಮದತುಂಗಾ ‖ ೧ ‖ ಸಿಂಧು ಭವನಾಶಿನಿ ಕೂಮುದ್ವತಿ ಶ್ರೀಪಂಝಾರ ; ಸುಂದಾರ ಭೀಮಾ ತಾಂಮ್ರಾ ಪರಣೀ ಮಲಾಹಾ ॥ ವಿಂದಾರೆ ಪಾವನ ಮಾಡುವ ಬಹು ನದೀಗಳ | ವಂದೆ ವ.ನಸಿಲಿಂದಾ ಪೊಗಳುವೆ ‖ ೨ ‖ ವಾರೂಣೀ ಫಲ್ಗೂಣೀ ಪ್ರೋಣಾಭದ್ರಗಂಡೀಕಿಹೇಮಾ | ಮಾರೂಪೇಣಿ ಗಾಯತ್ರೀ ವೇಗಾವತೀ ‖ ಸೂರಿಗಮ್ಯೆ ಕೌಸೀಕ ಮಣಿಕರಣೀಕಾ ಗೌತೂವಿಾಭಾ| ಗೀರಥೀಕಾಗೀನಿ ಶ್ರೀವೇತ್ರವತೀ ‖ ೩ ‖ ಹೇಮವತಿ ನೇತ್ರವತಿ ಪಾಪನಾಶೀ ಶ್ರೀ ಸೀತಾ | ಆ ಮಹಳಕನಂದಾ

ಹಯಗ್ರೀವಾ || ಹೇಮಮುಖರಿ ತಾಪೀನಿ ಕಾಳೀ ಸೌಪ
ರ್ಣಪೀನಾಕೀ | ಶ್ರೀಮತ್ಕಪಿಲಾ ಜಮದಗ್ನೀ ಪ್ರಣವಸಿದ್ಧಾ
|| ೪ || ಮರುದ್ವತಿ ಮಂದಿರಮೋನು ಕಾಮನೂನಾಸೀ ಚಕ್ರವತಿ|
ಗರುಡಾ ಶಂಖವತೀ ಕೂಹು ಮಹೇಶ್ವರೀ || ಸರಯುಜಯ
ಮಂಗಳ ಯೋಗಕೃತು ಪಾಲಾಗದಾ | ಧರಿಮಾ
ಲೀನಿಗಾರ್ಗೀಣೀ ದೇವವತೀ || ೫ || ಸಾವಿತ್ರಿ ಧನ್ಯ
ಮಾಲ ಧರ್ಮಚಕ್ರ ತೀರ್ಥ ಹರಿ | ಪ್ರಾಸತಿ ಇಂದ್ರಾಣೀ
ಪಾತಾಳ ಗಂಗಾ || ಶೈವಕುಂಡ ಕುಂಡೀನಿ ನೀರ ಕುಮಾ
ರಧಾರೀ ಕು | ಶಾವರ್ತ ಮೌಳೀ ಲೋಕ ಪಾವನೀ || ೬ ||
ಸ್ವಾಮೀ ಪುಷ್ಕರ್ಣ ಚಂದ್ರ ಪುಷ್ಕರಿಣೀ ಮಾನಸ ಪುಷ್ಕ
ರಣೀ ಶ್ರೀವರ್ಧ್ವ ಸರೋವರ ಪದ್ಮಸರಾ || ಸೋಮ
ಭಾಗಾವ್ಯಾಸ ಸಿಂಧು ಶ್ರೀ ಪೂಂಪಾ ಸರೋವರಾ ||
ವಾಮನ ಶ್ರೀ ಮಯೂರ ಸರೋವರಾ || ೭ || ರೋಮ
ಹರ್ಷಣ ತೀರ್ಥ ಸೀತಾ ಸರೋವರ ಪುಣ್ಯಧಾಮಾ ಶ್ರೀ
ಕಪಿಲತೀರ್ಥ ಧವಳ ಗಂಗಾ || ಭೀಮಾ ಸೇನಾ ತಟಾಕ
ಬ್ರಹ್ಮಜ್ಞಾನ ಕನ್ಯಹೃದಯ || ಶ್ರೀಮಷ್ಟ ಸಿಷ್ಟತೀರ್ಥ
ತಾರಾತೀರ್ಥ || ೮ || ಈ ತೀರ್ಥಗಳ ದಿವ್ಯ ನಾಮಾನಿತ್ಯ
ಪಠಿಸಲು | ಯಾತಕ್ಕಾದರೂ ವಿಘ್ನಬಾರದು || ಮಾತಾ
ರಿಷ್ಟ ಪ್ರಿಯ್ಯ ಪಾಣೀತ ಪಿರ್ಲನು ಬಹು ಪ್ರೀತನಾಗೀ ಬಿಡ
ದೆ ಪೊರವಾನು || ೯ || ೧೪೬ ||

ಶ್ರೀಕೃಷ್ಣಾವತಾರ ವರ್ಣನೆ.

ಶ್ರೀ ಗುರುಭ್ಯೋನಮಃ ಪದ. ರಾಗ. ಶಂಕರಾಭರಣ ತಾಳ ಆದಿ

ಇಷ್ಟು ತೀರ್ಥಕ್ಕೊಂದಿಸಿ । ಶಿಷ್ಟರ ಪಾಲಿಸುವಾ । ದು
ಷ್ಟರ ಶಿಕ್ಷೆ ಮಾಡುವ ಕೋಲೆ ॥ ದುಷ್ಟರ ಶಿಕ್ಷೆ ಮಾಡುವ
ಕರುಣಾ ಸಿಂಧು । ಕೃಷ್ಣಾವತಾರ ವರಣೀಪೆ ಕೋಲೆ
॥ ೧ ॥ ಬಾಣ ಕೀಚಕ ಶಕುನಿ । ಹೀನನ ಮುಚಿ ಇಲ್ವಾ
ಲಿ । ದಾನವಾಗ್ರಣಿಜರಿಜ ರುಗ್ಮಿಯು ಕೋಲೆ ॥ ದಾನ
ವಾಗ್ರಣಿಜಾರಾ ಸಂಧಾರುಗ್ಮೀಶತಧನ್ವೀ । ಧೇನೂಕಕೇಶಿ
ತೃಣವರ್ತಲವಣ ಕೋಲೆ ॥ ೨ ॥ ವಾಪೀವೀ ಕರ್ಣ
ಕೂವಾ । ಶಾಪೀವೃಷಸೇನ ಪೌಂಡ್ರ । ಕಾಪಾಕ ಸೂರ
ವೇನ ಕಿರ್ಮೀರ ಕೋಲೆ ॥ ಆಪಾಕ ಸೂರವೇನ ಕಿರ್ಮೀರ
ಸಾಲ್ವಬಕ । ಕೋಪೀಮು ತ್ಯಾಸನ ಮಣಿಮಂತ ಕೋಲೆ
॥ ೩ ॥ ಹಂಸಾಡಿ ಬಿಕಾಶಂಬಾರ । ಹಿಂಸಾತಾರಕ ದೈ
ತ್ಯೊ । ತ್ತಂಸಾನರಕಾ ಹಿರಣ್ಯಕಶಪೂ ಹೇಮಾಕ್ಷ ॥
ತಂಸಾ ನರಕ ಹಿರಣ್ಯಾ ವಿಪ್ರಚಿತ್ತಿ ಹಿಡಿಂಬ । ಕಂಸಾಸಂ
ಕರನೇಮೊವಲಾವ ಕೋಲೆ ॥ ೪ ॥ ಮರುಳಾರ ಭಾರವನ್ನು
ಧರಿಸಲಾರದೆ ಭೂಮಿ । ತರುಣೀಗೊರೂ ಪಾತಾಳೂತ
ಕೋಲೆ ॥ ತರುಣೀಗೋರೂ ಪಾತಾಳೂತ ದೈನ್ಯದಿಂದ ।
ಸರಸಿಜಾಸನಗೆ ಬಿನ್ನೈಸೆ ಕೋಲೆ ॥ ೫ ॥ ಭೂದೇವಿ
ಮೊರೆಕೇಳಿ । ಬಾಧೀಯ ತಪ್ಪೀಸಲು । ಮಾಧವ ಇದ್ದ
ಕ್ಷೀರಾಬ್ಧಿ ಕೋಲೆ ॥ ಮಾಧವ ಇದ್ದ ಕ್ಷೀರಾಬ್ಧಿಗೈತಂದು ।
ಸೀ ದಯ ಮಾಡೆಂದು ಪೇಳುವ ಕೋಲೆ ॥ ೬ ॥ ಮಾನ

ಕೂರ್ಮ ವರಾಹ । ಶ್ರೀ ನಾರಸಿಂಹವಟು । ದಾನವಾಂ
ತಕ ರಾಮ ರಾಮಕೃಷ್ಣ ಬುದ್ಧಾ ॥ ದಾನವಾಂತಕ ರಾಮ
ರಾಮಕೃಷ್ಣ ಬುದ್ಧಕಲ್ಕೀ । ನೀ ನಪ್ಪ್ರಸೀಗ ಪೊರೆಯು
ಬೇಕು ಕೋಲೆ ॥ ೭ ॥ ವಾಸುದೇವಸಂತ ವೇದವ್ಯಾಸ
ದತ್ತಾತ್ರೆಯು ಋಷಭ । ಹಂಸಾ ಕಪಿಲಾ ಹರಿಯೋ ಮಹಿ
ದಾಸಯಜ್ಞಾ ॥ ಹಂಸಾ ಕಪಿಲಾ ಹರಿಯೋ ಮಹಿ ದಾಸ
ಯಜ್ಞ ಶ್ರೀತಾಪಸಾನ । ಶ್ರೀ ವಿಶ್ವತೈಜಾಸಾತ್ಮಸ್ವರೂಪಯೆಂಬ
ಕೋಲೆ ॥ ೮ ॥ ಮಾಧವ ಪ್ರದ್ಯುಮ್ನಮಧ್ವ । ರಾಧಿತಾಂ
ಘ್ರಿ ತ್ರಿವಿಕ್ರಮ । ಶ್ರೀಧಾರ ಅನಿರುದ್ಧಕೋಲೆ । ಅನಿರುದ್ಧ
ವಾಮನ ಉಪೇಂದ್ರ ಅಧೋಕ್ಷಜ। ವೇದಾಗರ್ಭದಮೋದಾ
ರ ಪಾಲೀಸು ಕೋಲೆ ॥೯॥ ಪಾಹೀ ಶ್ರೀ ವೇದೋದ್ಧಾರ।
ಪಾಹೀಮಂದಾರೊದ್ಧಾರ ಪಾಹೀ ಶ್ರೀ ಭೂಮೋದ್ಧಾರ।
ಪ್ರಹ್ಲಾದಪಾಲ। ಪಾಹೀ ಶ್ರೀಭೂಮೋದ್ಧಾರ ಪ್ರಲ್ಹಾದಪರಿ
ಪಾಲ ಪಾಹೀ। ಪಾಹೀಯೆಂಬ ಚತುರಾಸ್ಯಕೋಲೆ ೧೦॥
ಬ್ರಹ್ಮನ ಮೊರೆಕೇಳಿ । ಮುಮ್ಮಳಿನ್ನೀಕೆ ಪೇಡು। ತಮ್ಮನ
ಅವತಾರ ದೇವಕಿಯಲ್ಲಿ ॥ ತಮ್ಮನಾ ಅವತಾರ ದೇವಕಿ
ಯಲ್ಲಿ ಮಾಡಿ । ನಿಮ್ಮನ ಕಾರ್ಯ್ವನೆಂಮ ಭಗವಂತ
ನ ಕೋಲೆ ॥ ೧೧ ॥ ವೈಕುಂಠ ಸ್ವೇತದ್ವೀಪ । ಶ್ರೀ
ಕಾರ ನಂತಾಸನಾ । ಮಾಕಾಂತೆ ಉಳಿದು ವಸುದೇವನಲ್ಲಿ।
ಮಾಕಾಂತೆ ಉಳಿದು ವಸುದೇವನಲ್ಲಿ ಪುಟ್ಟಿ । ಗೋಕೂಲ
ದಲ್ಲಿಬೆಳವೂತ ಕೋಲೆ ॥ ೧೨ ॥ ಮಾಕೂಳನಿಂದ ಬಂದ।
ಪೂತಾನಿ ಪ್ರಮುಖಾರ । ಘಾತೀಸಿ ಮುದದಿಂದಿರಳಾಗಿ

ಕೋಲೆ || ಘಾತಿಸಿ ಮುದದಿಂದಿರಲಾಗಿ ಹಬ್ಬಕೆಂದು । ಆ
ತೂರದಿಂದಾ ಕರಿನಾಲು ಕೋಲೆ || ೧೩ । ಸಂತೋಷದಿಂದ
ಪೋಗಿ | ದಂತಿಯ ಕೋಡು ಜ್ಯಾಗ | ಹಂತಾ ಮಲ್ಲರ
ಹತ ಮಾಡಿ ಕೋಲೆ || ಹಂತಾ ಮಲ್ಲರನಾ ಹತ ಮಾಡಿ
ಕಂಸಾವ್ಯರಂತಾ ಕಷ್ಟರಹಾನ್ಯೆಯಿಸಿ ಕೋಲೆ || ೧೪ |
ಮಥುರಾ ಪಟ್ಟಣಸೊಳು | ಮುದದಿಂದಿರಲು ಹರಿಯಾ ವಧಿ
ಸೂವೆನೆಂದೂ ಜರಿಜಾನು ಕೋಲೆ || ವಧಿಸೂವೆನೆಂದೂ ಜರಿ
ಜಾನು ಯುದ್ಧಕ್ಕೆ । ವದಗಾಲು ಅಸುರಾ ಮೋಹಕ ಕೋಲೆ
|| ೧೫ || ತಾಳಲಾರದವನರೂ | ಗೂಳೀವ ತೆಗೆದಂತೆ |
ನೀಲಾಂಗ ಜಲಧೀಮನಿ ಮಾಡಿ ಕೋಲೆ || ನೀಲಾಂಗ ಜಲಧೀ
ಮನಿ ಮಾಡಿ ದ್ವಾರಕ । ಮೇಲಾಗಿ ಧರೆಗೆ ಪೊಳಪೊಂದು
ಕೋಲೆ || ೧೬ || ಊರ ಸುತ್ತಾಲಿ ಗೋಡಿ | ತೋರೆಣೆದು
ಹೇಮಪೂರ್ಣ | ಘೊರಬಾಗಿಲಿಗೆ ನವರತ್ನ ಕೋಲೆ||
ಘೋರಾ ಬಾಗಿಲಿಗೆ ನವರತ್ನ ಪಟದುಳ | ಕೇರಿ ಕೇರಿಲ್ಲ ಕನ
ವಾಗೆ ಕೋಲೆ || ೧೭ || ಮನೆಯಿಂತಪ್ಪ ಬೀದಿ ಸಾಲೂ
ಸಾಲುಪ್ಪರಿಗೆ | ಹೇಳಾ ಲೇಸೆಂದೂ ಯಣಿಸಿಲ್ಲ ಕೋಲೆ ||
ಹೇಳ ಲೇಸೆಂದೂ ಯಣಿಸಿಲ್ಲ ಯಾದವ । ರಾಜಾಧಿಪನೇನು
ವರ್ಣಿಸೆ ಕೋಲೆ ||೧೮| ಮಧುಸೂದನನ ಸಭೆ । ಬದಿಯಲ್ಲಿ
ಸತ್ಯ ಮಿತ್ರ । ಹದಿನಾರು ಸಾಸಿರ ಅರಸಿಯರೂ ಕೋಲೆ
ಹದಿನಾರು ಸಾಸೀರ ಅರಸೀರ ಅರಮನೆ ನವರತ್ನವೇನು
ವರ್ಣಿಸೆಕೋಲೆ || ೧೯ || ಮಂಗಳ ಮನೆಗೆ ಚಿತ್ರ | ರಂಗಾವ

ಲಿಟ್ಟೀಹರು| ಅಂಗಾಳದಲ್ಲಿ ವೃಂದಾವನಕೋೀಲೆ|| ಅಂಗಾಳ
ದಲ್ಲಿ ವೃಂದಾವನಥಾ ಕ್ರಿ ವೃಷ್ಣ| ಶೃಂಗಾರವಾಗೀ ಕಾಣಿಸೀ
ಕೋೀಲೆ || ೨೦ || ಕಡಬಡಿ ಸೂಡಿಯುಂಬ| ಬಿಡಿನೂಡಿಗಾ
ಳೊಂದಿಲ್ಲ| ಬಡವಾರೊಬ್ಬರಿಲ್ಲ ವಾಊರೊೀಳುಕೋೀಲೆ|| ಬಡ
ವಾರೊಬ್ಬಾರಿಲ್ಲಾವಾ ಊರೋೀಳುದಾನವ| ಕೊಡವವರೆಂ
ಬೊರು ಇದ್ವಿಲ್ಲಕೋೀಲೆ || ೨೧ || ವಂದೊಂದು ಸ್ತ್ರೀಯುರಲ್ಲೀ|
ವಂದೊಂದು ರೂಪನಾಗಿ| ಇಂದಿರೇ ಅರಸಾ ರಮಿಸೂವ
ಕೋಲೆ|| ಇಂದಿೀರೆ ಅರಸಾ ರಮಿಸೂವೀತಾನವೇವ| ಎಂದೆಂದು
ತುತಿ ಸಾಲಾರಾವುಕೋೀಲೆ || ೨೨ || ಅಜನಿಂದ ವಶವಲ್ಲ|
ಅಜಿನಾಂಬರೇನುಬಲ್ಲ| ಘುಜಗಾಖಗೇಂದ್ರರೇನು ಬಲ್ಲಾರೂ
ಕೋೀಲೆ|| ಭುಜಗಖಗೇಂದ್ರರೇನು ಬಲ್ಲಾರು ಚನ್ನಾಗಿ ತ್ರಜಗ
ದ್ವಂದ್ಯಾನ ವಾಹಿಮೆ ವರ್ಣೀಸಿಕೋೀಲೆ || ೨೩ || ನಾರೀರೊ
ಬ್ಬಾರಲ್ಲೀ| ನೂರು ನೂರೂ ಮಕ್ಕಳ| ನೀರಜನಾಭಾ ಪಡದಾ
ನು ಕೋೀಲೆ|| ನೀರಾಜನಾಭಾ ಪಡದಾನು ಪೇಳಾಲು| ಆರಿಂದ
ಪಶವು ನೋೀಡಿರಿಕೋೀಲೆ || ೨೪ || ಮನುಜಾರಂತೀವನೆಂದು|
ದನುಜಾರೆ ಓಳಿೀವಾಪು| ಗುಣವಂತರೆಲ್ಲಾ ನಿರ್ಲೀಪನೇದೂ||
ಗುಣವಂತರೆಲ್ಲಾ ನಿರ್ಲೆಪನೆಂದು ತಿಳಿದು| ಅನುಭೋೀಗಿಸು
ಸುವರೂ ಅಭಯುವ ಕೋೀಲೆ || ೨೫ ||

|| ಭೈಷ್ಮಿ ಮುಂಯ್ಯದಕಥಾ ||

ಇಂತೀಪರಿವರ್ಣಿಸಿ| ಕುಂತೀ ಸೊಸೆ ಸೂಭದ್ರೆ| ಪಿಂತ್ಯೆತಂ
ದದಕೆ ಪ್ರತಿಮುಂಯ್ಯಕೋೀಲೆ|| ಪಿಂತ್ಯೆತಂದದಕ ಪ್ರತಿಮುಯ್ಯ

ಭೈಷ್ಟ್ರಿವೈದ| ಸಂತೋಷ ಕಥೆಯೂ ಬರವೇನು ಕೋಲೆ ||೨೬||
ಲೋಕಾವಾರ್ತೆ ಇದಲ್ಲಾಲೋಕನಾಥನವಾತ| ಬೇಕಾದ
ವರಿಗೆ ಬಲುರುಚಿ ಕೋಲೆ|| ಬೇಕಾದವರಿಗೆ ಬಲು ರೂಚಿ
ಸತ್ಕಥಿ| ಶಾಕ ಮನುಜರಿಗೆ ಸೊಗಸಾವು ಕೋಲೆ || ೨೭ ||
ಮಾತಾಪಿತ್ರರೊಂದೆನಲು| ಮಾತೂಬಿಡುವರುವರುಷ|
ನೀತಿಗೆಟ್ಟವಳು ಪರಸತಿ ಕೋಲೆ|| ನೀತಿಗೆಟ್ಟವಳೂ ಪರಸತಿ
ಬೊಗಳಾಲ| ಪ್ರೀತಿವಾತೆಂದೂ ಹಿಗ್ಗೀರೂ ಕೋಲೆ ||೨೮||
ಧರಿಯೊಳೀಪರಿಪಾಪಿ| ನರರಿಗಿದು ಸೊಗಸೀತೆ| ಸುರುವೇ
ಶನಧರ್ಮಂಗೆರಿಳೊಂದು ಕೋಲೆ|| ಸುರವೇಶನಧರ್ಮಂಗೆರಿಳೊಂ
ದುಸ್ವಾಮೀಪಾದ| ಸ್ಮರಗೀ ಬಿಸ್ನೈಸೋರು ಇಂತೆಂದು
ಕೊಲೆ || ೨೯ || ಅಂವೂ ನವಮಣ್ಣಗಳು| ತಂದಿದ್ದ ಮುಂಯಸ್ವಾ
ವ್ರ| ಇಂದೀಗು ತೀರಲಿಲ್ಲ ಭಗವಂತ ಕೋಲೆ|| ಇಾದೀಗೂ
ತೀರಲಿಲ್ಲ ಭಗವಂತ ನಿಮಗೀದು| ಛಂದಾವೆಜನರೇನು
ಅನ್ನಾರೇ ಕೋಲೆ || ೩೦ || ಜಾರಾ ಚೋರಾನೆಂದು| ಧರು
ಣೀಯೊಳಗೆಲ್ಲಾ| ನೂರು ನಿಂದೆಯನು ಮಾಳ್ಪರು ಕೋಲೆ||
ನೂರು ನಿಂದೆಯನು ಮಾಳ್ಪರು ಈ ಮಾತು| ನೂರಾವಂ
ದ್ಯಾಕಾಗಬಾರದು ಕೋಲೆ || ೩೧ || ಅರಸೀರಂದನಾತೀಗೆ|
ಪರಿಪೂರ್ಣನಂದಾಂಬುಧಿ| ಹರಿಮುಂದಕ್ಕಿತದಿಂಜವದಿಂದ
ಕೋಲೆ|| ಹರಿಮುಂದಸ್ಕಿತದಿಂಜವದಿಂದ ವಿಪ್ರಾರು ಕರಸೀದ
ಮಾಪುರ್ತ ವತಿಗಿ ಸಾಲು ಕೋಲೆ || ೩೨ || ದುರ್ಗಾಭು
ಶ್ರೀ ವಲ್ಲಾಭ| ಭಾರ್ಗವವೇದವ್ಯಾಸ| ಗರ್ಗಾಚಾರ್ಯರೆ ಮೊ
ದಲಾದ ಕೋಲೆ|| ಗರ್ಗಾಚಾರ್ಯರೆ ಮೊದಲಾದ ಬಹುಋ

ಪಿ| ವಗರ್ಾವಾಕ್ಷಣಕೆ ಒದಗೀತು ಕೋಲೆ || ೩೩ || ಸುರು ಗೂರು ಬ್ರಹಸ್ಪತಿ| ತ್ವರದಿಂದ ಶ್ರೀ ವಿಘ್ನೇ| ಸ್ವರನಾರ್ಚನಿಯು ನು ಮಾಡೆಂದು ಕೋಲೆ|| ವಿಘ್ನೇಸ್ವರ ನಾರ್ಚನೆಯು ಮಾಡೆಂದು ಪೂಜದ್ರವ್ಯಾ ತರಿಸೆಂದು ಪರಿಗೆ ಬಿನ್ನೈಸಕೋಲೆ || ೩೪ || ವರಸೀಜನಾಭ| ತನ್ನೆರಿಂದೊಡಗೂಡಿ| ಬೆರಸೀಮಂಗಳ ಸ್ನಾನ ಅಂಬಾರಉಟ್ಟ್ರಾ || ಬೆರಸಿ ಮಂಗಾಳಸ್ನಾನ ಅಂಬಾರ ಉಟ್ಟ್ರು ವಿಘ್ನೇ| ಸ್ವರನಾ ಪೂಜೆಯುನೂ ಕೈಕೊಂಡ ಕೋಲೆ || ೩೫ || ಮೊರತುಂಬ ಮುತ್ತಿನೊಳಗೆ| ಶಿರಿಗಣಪತಿ ಯುನಿಟ್ಟು| ಪರಿ ಪರಿ ಪೂಜಾ ಸಾಧನ ಕೋಲೆ|| ಪರಿ ಪರಿ ಪೂಜಾ ಸಾಧನ ಪ್ರವ್ಯಂಗಾಳ| ತರಿಸೋರಾನೇನೂವರ್ಣಿಪೆ ಕೊಲೆ || ೩೬ || ಚಿಗಳಿತಂಬಿಟ್ಟು ಕಬ್ಬು| ಮಗಿವಾಂವು ಬಾಳಿ ತೆಂಗು| ಬಗೆ ಬಾಗೆ ಫಲನೆನಗಡಲೀಯು ಕೋಲೆ|| ಬಗೆ ಬಾಗೆ ಫಲನೆನಗಡಲೀ ಸಮರ್ಪಿಸಿ| ಜಗದೀಶಗಣಪತಿಯು ಪೂಜೀಸಿ ಕೋಲ || ೩೭ || ನಕ್ಕ್ಯಭಾಂವಿ ರುಗ್ಮಿಣಿ| ಪತ್ತಾರು ಸಾವಿರ| ಮಿತ್ರೇರು ಗಣಪಗೆ ವಂದೀಸಿಕೊಲೆ| ಮಿತ್ರೇರು ಗಣಪಾಗೊಂದೀಸಿನಾವಿಂದ| ಅತ್ತೀಗೆಯರನ್ನೂ ಗೆಲಬೇಕು ಕೋಲೆ || ೩೮ || ಪದ ಪದ್ಯ ಗಾಳಿಂದ| ಚದುರಮಾತುಗ ಳಿಂದ| ಸುಮತಿ ಸೂಭದ್ರಿ ದ್ರೌಪದಿ ಕೋಲೆ|| ಸುಮತೀ ಸೂಭ ದ್ರಿ ದ್ರೌಪದಿಯಾನಿಂದು| ಮುದದಿಂದ ಗೆಲಬೇಕು ಗಣಪತೀ ಕೋಲೆ || ೩೯ || ಕಂತೂ ಮಾತೆಯು ಲೇಕಾದಂತಗಿಂತೂ ಪ್ರಾ ರ್ಥಿಸಿ| ಸಂತೋಷದಿಂದ ಸುಭೋಜಾನ ಕೋಲೆ|| ಸಂತೋಷ ದಿಂದ ಸುಭೋಜಾನ ಮಾಡಿದಾರು| ಅಂತು ಋಷಿಗಳಾ

ಒಡಗೂಡಿ ಕೋಲೆ ||೪೦|| ಕುಂಭಿಣಿ ಸೂರೆಗೆ| ತಾಂಬೂ
ಲಪಾಂತು ಕೊಟ್ಟು| ಸಂಭ್ರಮದಿಂದಾಲೆಲ್ಲಾರು ಕೋಲೆ||
ಸಂಭ್ರಮದಿಂದಾಲೆಲ್ಲಾರು ಕೂಡಿದಿ| ವ್ಯಾಂಬಾರಗಳನೂ
ಉಟ್ಟಾರೂ ಕೋಲೆ || ೪೧ || ಸೂತಣತಿ ಕೆಲವಾರು| ಸಾಲಾ
ವಾಳೀ ಪಟವಾಳಿ| ಚಾರು ವಸ್ತ್ರಗಳು ಕೆಲವಾರು ಕೋಲೆ||
ಚಾರುವಸ್ತ್ರಗಳು ಕೆಲವಾರು ಉಟ್ಟಿತುರು ನಾರೇರನೇನೂ
ವರ್ಣೀಸೆ ಕೋಲೆ || ೪೨ || ರಾಕುಟೀಚಾರಿ ಗೊಂಡೆ| ಹಾ
ಕೀದಚಂದ್ರ ಸೂರ್ಯ| ನೇಕಾಭರಣವು ಸಾವಾರುಕೋಲೆ|
ಅನೇಕಾಭರಣವು ಸರ್ವಾರುಧರಿ ಸಾಲು| ನಾಕಾಣೆನೆಲ್ಲಾ
ಚಲ್ಪೀಕೆ ಕೋಲೆ || ೪೩ || ರುಗ್ಮೀಣೀ ಶ್ರೀ ಸತ್ಯ| ವಿಕ್ಕಾ
ನಾರಿಯರೆಲ್ಲ ಆಕ್ಕಾನಾವಿಂದೂ ಗೆಲಬೇಕೆ ಕೋಲೆ|| ಅಕ್ಕಾ
ನಾವಿಂದೂ ಗೆಲಬೆ ಕರಿಯುನುತಾಲಿ| ಅಕ್ಕಾರದೀವ ನೂತು
ಪೊರೂ ಕೋಲೆ || ೪೪ || ಕೇರಿ ಕೇರಿ ಯೊಳೆಲ್ಲ| ನಾರೇರು
ಮುದದಿಂದ| ವಾರಾಣಪುರವಾ ನಾಡಿ ಕಂಡೆನೆಕೋಲೆ| ವಾ
ರಾಣಪುರವನಾಳಿ ಕಂಡೆ ಪೆಯಂದು| ಹಾಡೈನುತಿಪರೂ ಬಲು
ಭಾವಿ ಕೊಲೆ || ೪೫ || ಸವತ್ರಿಗೆ ಸೋಲುವಾರೆ| ಸಿವೃ ತಂ
ಗೀಯರಾರೂ| ಸವಿತ್ರಿಸಿ ರಿವಗೆ ನಿಜವಾಗಿ ಕೋಲೆ|| ಸವಿತ್ರಿಸಿ
ರಿವಗೆ ನಿಜವಾಗಿಪುಂದು ಪರ| ಜೊಮ್ಮಾನಕೇಳ್ವಾಳು ರು
ಗ್ಮಿಣಿ ಕೋಲೆ || ೪೬ || ತಲುಣೀಯು ಪನಾತೆಗೆ ಮುಂ| ಗರು
ಳುತಿದ್ದು ತಕೃಷ್ಣ| ಕಿಂದಗೆಯಿಂದಾ ಗೆದ್ದೀವೆ ಗೆದ್ದೀ|| ಕಿಂದ
ಗೆಯಿಂದ ಗೆದ್ದೀಯೋ ಗೆದ್ದೀಯೆಂದು| ಕರಸೀವ ಸರ್ವದೇ
ಶಾವ ಕೋಲೆ || ೪೭ || ಕಾಶೀ ಗುಜ್ಜರ ಗೌಡ| ದೇಶಾವೂ

ದಲಾದ ಬಹು| ದೇಶಾದ ಜನರನು ತ್ವರದಿಂದ ಕೋಲೆ|| ದೇ
ಶಾದ ಜನರೂ ತ್ವರದಿಂದ ಬಂದಾರು ಸ| ತೋಷಾಪ ಮುಂ
ಡ್ಯ ನೋಡಾಲು ಕೋಲೆ || ೪೮ || ಪಾಕಶಾಸನಾದಿ|ದಿ|
ಪಾಕಾಸರೆಲ್ಲಾರು| ಶ್ರೀ ಕಾಂತನಾಜ್ಞಾಶಿರಸಾವಹಿಸೂತಾ||
ಶ್ರೀಕಾಂತನಾಜ್ಞಾಶಿರಸಾವಹಿಸೂತಾಲಿಅ| ನೇಕಾಸಂದದಲೀ
ಬಂದಾರು ಕೋಲೆ || ೪೯ || ಅಷ್ಟಾದಿಕ್ಪಾಲಕಾರು ಅಷ್ಟೇವೆ
ವಸುಗಾಳು| ಅಷ್ಟವಮರುತ್ತುಗಾಳು ಸೂರ್ಯರೂ ಕೋಲೆ||
ಅಷ್ಟು ವಮರುತ್ತುಗಾಳು ಸೂರ್ಯರು ಬಂದಾರು| ಶ್ರೀಷ್ಟೇಶನಾ
ಜ್ಞಾಬಲಗೊಂಡು ಕೋಲೆ || ೫೦ || ಅತಳಾವಿತಾಳಾದವರು
ಸುತಳಾ ಪಾತಾಳಾದವರು| ಮತಿಲುಳ್ಳಭೂಭುರ್ವ ಸ್ವಲೋಕ
ಕದವರು|| ಮತಿಉಳ್ಳಭೂಭುರ್ವ ಸ್ವಲೋಕವವರೆಲ್ಲಾ| ಚ್ಯು
ತನಾಜ್ಞನಂತೆ ಬಂದಾರು ಕೋಲೆ || ೫೧ || ತೀರಂದಗಾ
ತೀರ್ಜೀಯ| ವಾರಾಣಸೇರ ತಮ್ಮ| ನಾರೇರಾಪತ್ಯರಸಹಿ
ತಾಗಿ ಕೋಲೆ|| ನಾರೇರಾ ಪತ್ಯರಸಹಿತಾಗಿ ಬಂದಾರು| ನಾರಾ
ಯಣನಾಜ್ಞಾಶುಭವೆಂದು ಕೋಲೆ || ೫೨ || ನವಖಂಡ
ದೊಳಗಿದ್ದ| ಕವಿಗಾಳೆಲ್ಲಾರು ಕೂಡಿ| ಭುವನೇಶನಾಜ್ಞಾ
ಕೈಕೊಂಡು ಕೋಲೆ|| ಭುವನೇಶನಾಜ್ಞಾ| ಕೈಕೊಂಡು
ದ್ವಾರಕೀಗೆ| ತವಕಾದಿಂದಲ್ಲೀ ಬಂದಾರು ಕೋಲೆ
||೫೩|| ಸತ್ಯಲೋಕಾಧೀಶ| ಪುತ್ರಾರು ಪ್ರವೊಮ್ಮಗ| ಸತ್ಯಾಸಂಕ
ಲ್ಪನ ಸಂಸಾರ ಕೋಲೆ|| ಸತ್ಯಾ ಸಂಕಲ್ಪನಸಂಸಾರ ಈ
ಭಾಗ್ಯ| ಪೃಥ್ವೀಯೊಳಾರಾರಿಗಿಲ್ಲಾವು ಕೋಲೆ || ೫೪ || ಭಾ
ವಾಶುದ್ಧೀಯಲಿಂದ| ಯಾವತ್ತು ಜನಬಂದ| ದೇವಾ
ನಂಘ್ರೀಗೆ ನಮಿಸಾಲು ಕೋಲೆ|| ದೇವನಂಘ್ರಿಗೆನಮಿಸಾಲು

ಸರ್ವಜ್ಞ। ಸಾವಾಧಾನದಲೀ। ಸಂತೈಸಿಕೋಲೆ ‖ ೫೫ ‖
ಬಂದಾ ಜನರಿಗೆಲ್ಲಾ। ನಂದಾದಿಂಮುಣಿಸೂತ। ಯಿಂದು
ತೆರಳೀರೀ ಗಜಪೂರಕ್ಕೆಂದು। ಇಂದೂ ತೆರಳಿರೀ ಗಜ
ಪುರಕ್ಕೆಂದು ಶ್ರೀ। ಇಂದೀವರಾಕ್ಷತೆರಳಾಲು ಕೋಲೆ
‖ ೫೬ ‖ ಗರುಡಾ ಪೀತಾಂಬರೀವ । ಮರುತಾಕಿರೀಟ
ವೀವ। ಶಿರಿದೇವಿ ಗಂಧಾವನ ಮಾಲಿ ಕೋಲೆ‖ ಶಿರಿದೇವಿಗಂ
ಧಾವನಮಾಲಿ ಯೀವಾಳು। ಸರಸೀಜಾಸನ ಕಂಸ್ತುಭ ವೀವ
ಕೋಲೆ ‖ ೫೭ ‖ ಸೋಮಾ ಸೂರ್ಯರೂ ಕನಡಿ। ಪ್ರೇಮುದಿಂ
ತೋರುವಾರು। ಶ್ರೀ ಮಾಹದೇವ। ನವವೈಜಯಂತೀ‖ ಶ್ರೀ
ಮಾಹದೇವಾನವವೈಜಯಂತಿಯೀವ। ಶ್ರೀಮಾರೂತ ಹಾಂ
ವೀಗಿಕೊಡುವಾನು ಕೋಲೆ ‖ ೫೮ ‖ ಉರಗಕುಂಡಲವೀವ।
ಗರೂಡಾನು ರಥವಾದ। ಪರಮಾ ಪುರುಷನ ಸೌಭಾಗ್ಯ
ಕೋಲೆ‖ ಪರಮಪುರುಷನಾ ಸೌಭಾಗ್ಯ ವರ್ಣೀಸಾಲು। ಶಿರಿ
ದೇವಿಗರಿಮೂ ಯಂವೆಂದು ಕೋಲೆ ‖ ೫೯ ‖ ರಾಮಾವ್ಯಾಸಾಗೆ
ಋಷಿ। ಸ್ತ್ರೋಮಾವೃಂದಾವನಕ್ಕೆ। ಶ್ರೀ ಮನೋರಮನೂ
ವಂದೀಸಿ ಕೋಲೆ‖ ಶ್ರೀ ಮನೋರಮನೂ ವಂದೀಸಿ ತೆರಳುವ।
ಈ ಮಾಹವಾಡಂಬ ನೋಡಿರಿ ಕೋಲೆ ‖ ೬೦ ‖ ಸತ್ತೀಗಿಪಿಡಿ
ವಬಹ್ಮ। ವೃಕ್ಷಾರಿ ಬಟ್ಟಲೀವ। ಎತ್ತೀಚಾಮರನಾಮರು
ತಾನು ಕೋಲೆ‖ ಎತ್ತೀಚಾಮರಾವಾಮರು ತಾಬೀಸೂವ
ಪುರುಷೋತ್ತಮನೇನು ವರ್ಣೀಪೆ ಕೋಲೆ ‖ ೬೧ ‖ ಆಶೀ
ರ್ವಾದವು ರಾಣಿ।ವಾಸಕ್ಕೆ ಮಾಡಿರೆಂದು ಶ್ರೀ ಸುರ
ಗುರುವಿಗೆ ಪೇಳುವ ಕೋಲೆ‖ ಶ್ರೀ ಸುರಗುರುವೀಗೆ

ಪೇಳೂವ ಕೃಷ್ಣಾನು। ಆಸಂತೋಷ। ವೇನು ವರ್ಣಿಸಿಪೆ ಕೋಲೆ ॥ ೬೨ ॥ ಅಬುಜಾಕ್ಷಿರುಕ್ಮಿಣಿ। ಶುಭಲಗ್ನವೀಗ ಬಂತು। ಸೋಬಗೀಲಿ ತೆರಳವ್ವ ಗೆಲುವೆಂದು ಕೋಲೆ॥ ಸೊಬಗೀಲಿ ತೆರಳವ್ವಗೆಲುವೆಂದು ಬ್ರಹಸ್ಪತಿ। ಅಭಯಾವಕೊಟ್ಟೊ ಕಳಸೂವಕೋಲೆ ॥ ೬೩ ॥ ಶ್ರೀ ಸತ್ಯಭಾಮಿದೇವಿ। ಈ ಸಮಯದಲೀ ಸಾಗು। ಲೇಸಾಗಿಬರುವೆನ್ವ ಸೋಲಿಲ್ಲ ಕೋಲೆ॥ ಲೇಸಾಗಿಬರೂವೆನ್ವಸೋಲಿಲ್ಲವಿಲ್ಲವೆಂದು। ತಾನಾರಿ ಕಳಿಸೀದ ಸುರಗುರು ಕೋಲೆ ॥ ೬೪ ॥ ಐಸತ್ತಾರೂ ಕೋಟೀಯಾ। ದಾನವಾರ ಸೈನ್ಯವು। ಪೇನಾರ ಮುಂದೆ ನಡದೀತು ಕೋಲೆ॥ ದೇವಾರಮುಂದೆನಡದಿತು ಪರದೇಶಾದ। ಯಾವತ್ತು ಸೈನ್ಯ ಮುಂದಾಗಿ ಕೋಲೆ ॥ ೬೫ ॥ ಹತ್ತಾರೂ ಸಾವಿರದ। ವಿಸ್ತ್ರೀಯಾರ ಪಲ್ಲಕ್ಕಿ। ಪ್ರತ್ತ್ಯೇಕ ಪ್ರತ್ತೇಕ ನಡದಾವು ಕೋಲೆ॥ ಪ್ರತ್ತ್ಯೇಕ ಪ್ರತ್ತ್ಯೇಕ ನಡಿವಾಲು ಸಂಪಣಿ। ಪೃಥ್ವೀ ಹಿಡಿಯದುವನಿಸೀತು ಕೋಲೆ ॥ ೬೬ ॥ ನಾರೀರೂಬ್ಬೊಬ್ಬರಿಗೆ। ನೂರು ನೂರು ಪುತ್ರರು। ಬ್ಯಾರೆ ಬ್ಯಾರ್ಯಾಗೀ ತೆರಳೋರು ಕೋಲೆ॥ ಬ್ಯಾರೆ ಬ್ಯಾರ್ಯಾಗೀ ತೆರಳೋರವಾರಪೆ ಸದು। ನಾರಾಯಣಾರೆಂದು ಕರಪೋರು ಕೋಲೆ ॥ ೬೭ ॥ ಪೆಂಡೇ ಪೆಂಡೆವ ಜವಳಿ। ಭಂಡೀ ಭಂಡಿಲೀ ತುಂಬಿ। ಮಂಡಾಲ ಪುರಕ್ಕೆ ನಡದಾವು ಕೋಲೆ॥ ಮಂಡಾಲ ಪುರಕ್ಕೆ ನಡದಾವು ನೋಡಾಲುಭೂ। ಮಂಡಾಲದೊಳಗೆ ಮಿಗಿಲಾಗಿ ಕೋಲೆ ॥ ೬೮ ॥ ಸತ್ಯಾಭಾಮಿ ರುಗ್ಮಿಣಿ। ಮತ್ತಾರೂ ಮಹಿಷಿಯಾರು। ಉತ್ತಮಂದಣಾವಾ ಯೇರುತ ಕೋಲೆ॥ ಉತ್ತ

ಮುಂದಣವಾ ಯೇರೂತಾನಂದದಿಂದ। ಜತ್ತಾಗ ಬೀಡದೆ ನಡ ದಾರೂ ಕೋಲೆ ॥ ೬೯ ॥ ಎಲದಲ್ಲಿ ಋಷಿಗಳು। ಕೆಲದಲ್ಲಿ ಕೊಂಡಾಡೂ। ಬಲುದಂಡು ಹಿಂದೆ ಮುಂದಾಗಿ ಕೋಲೆ॥ ಬಲು ದಂಡು ಹಿಂದೆ ಮುಂದಾಗಿ ಬಲರಾಮ। ಜಲಜಾಕ್ಷ ನಡುವೆ ಪೋಪಾರು ಕೋಲೆ॥ ೭೦ ॥ ಶ್ರೀ ನಾರದ ಮುನಿಗಾಯನವ ಮಾಡುವಾನು। ಆ ನಾಕಜಾರೆಲ್ಲ। ಹೂವಿನ ಮಳೆಯ॥ಆನಾ ಕಜರೆಲ್ಲ ಹೂವ್ವಿನ ಮಳೆಗರದಾರು।ಪ್ರಾಣೇಶ ವಿಠಲಾಜಯ ವೆಂದು ಕೋಲೆ ॥ ೭೧ ॥ ೨೧೭ ॥ ಶ್ರೀ ಮಧ್ವೇಶಾರ್ಪಣ ಮಸ್ತು ॥

॥ ದೇವರ ಭಕ್ತವಾತ್ಸಲ್ಯ ವರ್ಣನೆ ॥

ಶ್ರೀ ಗುರುಭ್ಯೋನಮಃ ರಾಗ. ಶಂಕರಾಭರಣ ತಾಳ ಆದಿ

ದುಂದುಭಿ ಭೇರಿ ಆ। ನಂದದಿಂಭಾರಿಸೋದಾ। ಛಂದ ಛಂದ ದಲೀ ಸುರರೆಲ್ಲ ಕೋಲೆ॥ ಛಂದ ಛಂದದಲಿ ಸುರರೆಲ್ಲ ತುಂ ಬರಾ। ನಿಂದು ಪಾಡುವನೂ ಹರಿಯ ಮುಂದೆ ಕೋಲೆ ॥ ೧ ॥ ರಂಭೆ ಊರ್ವಶೀಯರು। ಮುಂಭಾಗದಲ್ಲಿ ಬಂದು। ಸಂಭ್ರ ಮದಿಂದ ಕುಣೀವಾರು ಕೋಲೆ॥ ಸಂಭ್ರಮದಿಂದ ಕುಣಿವಾ ರಾಕಾಲಕ್ಕೆ ನಂಬೇನಾಶ್ಚರ್ಯ ಮಿಗಿಲಾಗೆ ಕೋಲೆ ॥ ೨ ॥ ಪಿರಿದು ಕೊಂಡಾಡೂವರು। ಹರಿಮುಂದೆ ಭಟರೆಲ್ಲ। ಹಿರೀ ದಾಗಿ ಮಹಿಮೆ ವಂದೊಂದು ಕೋಲೆ॥ ಹಿರಿದಾಗಿ ಮಹಿಮೆ ವಂದೊಂದೆ ಕೇಳಾಲು। ಪರಮಾಹಲ್ಲಾ ದಾವಾಹಾದು ಕೋಲೆ ॥ ೩ ॥ ಶ್ರವಣಾವೆ ಮೊದಲಾದ। ನವವಿಧ ಭಕೂ

ತಿಯ| ತವಕದಿಂ ಕೊಡುವಾ| ಸುಜನರ್ಗೆ ಕೋಲೆ|| ತವ
ಕದಿಂ ಕೊಡುವಾ ಸುಜನರ್ಗೆ ಹರಿಯೆಂದು| ಹವಣೀಕಿ
ಯಿಂದ ಪೊಗಳೋರು ಕೋಲೆ ||೪|| ಜೀವೇಶ ವಂದೆ
ಪೊದ| ಶ್ರೀವಂಛತ್ತು ದ್ವೈತಜ್ಞಾನ| ಕೇವಲ ಪೃತ್ಯರಿಗೀವೋನು
ಕೋಲೆ|| ಕೇವಲ ಭೃತ್ಯರಿಗೀವೋನು ಹರಿಯೆಂದು| ನಾವ
ಘಾನದಲೀ ಪೊಗಳೋರು ಕೋಲೆ ||೫|| ಶ್ರೀ ಶಂಖಚಕ್ರ
ಪೀತ| ವಾಸುವಮ್ಮಿಗೆ ಬಿಡುವ| ಮಾಸತಿ ಬಿಡುವಾ ಒಮ್ಮೀ
ಗೆ ಕೋಲೆ|| ಮಾಸತಿ ಬಿಡುವಾ ಒಮ್ಮೀಗೆ ಸ್ವಾಮಿ ತನ್ನ|
ದಾಸರಬಿಡನೆಂದ್ಪೊಗಳೋರು ಕೋಲೆ ||೬|| ದೇವಾಧಿ
ಪತ್ಯ ಕೊಡುವ| ಶ್ರೀ ಸಂಗಿ ಭಾಗ್ಯಕೊಡುವ| ಸ್ತ್ರೀ ಸುತ
ರನ್ನ ಕೊಡುವನು ಕೋಲೆ|| ಸ್ತ್ರೀ ಸೂತರನ್ನ ಕೊಡುವನು
ಕೃಷ್ಣ ತನ್ನ| ದಾಸತ್ವಕೊಡನೆಂದ್ಪೊಗಳೋರು ಕೋಲೆ ||೭||
ಗೃಹಭಕ್ತರಿಗೆ ಬಂದ| ಬಡತಾನ ಸ್ಥಿರವಲ್ಲ| ಕಡುಪ್ಪಾಪಿಗಳಿ
ಗಿಪ್ಪ ಸಂಪತ್ತು ಕೋಲೆ|| ಕಡುಪ್ಪಾಪಿಗಳಿಗಿಪ್ಪ ಸಂಪತ್ತು
ನಿಲ್ಲವೆಂದು| ದೃಢದಿಂದ ಕೂಗೀ ಪೊಗಳೋರು ಕೋಲೆ
||೮|| ರುದ್ರೇಂದ್ರಾದಿಗಳೆಲ್ಲ| ಕಷ್ಟ ಭಕ್ತಿಮಾಡ್ಪರು| ಬು
ದ್ಧಿವಂತರಾರು ಭೀಮಸೇನ ಕೋಲೆ|| ಬುದ್ಧಿವಂತರಾರು ಭೀಮ
ಸೇನ ದ್ರೌಪದಿ ಶುದ್ಧ ಭಕ್ತರೆಂದು ಪೊಗಳೋರು
ಕೋಲೆ ||೯|| ಪಿಂಡು ಗಡಲೋಳು ತುಲಸೀ| ಅಂಡಾಜ
ರೊಳಗೆ ಗರುಡ| ಪುಂಡರೀಕಾಕ್ಷನ ಭಕ್ತರೋಳು ಕೋಲೆ||
ಪುಂಡರೀಕಾಕ್ಷನಭಕ್ತರೋಳಧಿಕಾರು| ಪಾಂಡವರೆಂದು
ಪೊಗಳೋರು ಕೋಲೆ ||೧೦|| ಭಕ್ತಾರಿವಸ್ತ್ರಾ ಭರಣ|

ಭಕ್ತಾರೆ ಅನ್ನ ಉದಕಾ ಭಕ್ತಾರೆಬಂಧೂ ಬಳಗಾವು ಕೋಲೆ||
ಭಕ್ತಾರೆಬಂಧೂ ಬಳಗಾವು ಸ್ವಾಮಿಗೆಂದು।ಜತ್ತೊತ್ತಿಕೂಗಿ
ಹೊಗಳೋರು ಕೋಲೆ || ೧೧ || ಭಕ್ತಾರುಂಡದ್ದೇ ಊಟ||
ಭಕ್ತಾರುಟ್ಟಿದ್ದೇ ಉಡಿಗೆ| ಭಕ್ತಾರೆ ಪಂಚ ಪ್ರಾಣಾರು
ಕೋಲೆ|| ಭಕ್ತಾರೆ ಪಂಚಾ ಪ್ರಾಣಾರು ಹರಿಗೆಂದು ವಿಸ್ತಾರ
ದಿಂದ ಹೊಗಳೋರು ಕೋಲೆ || ೧೨ || ವಿಪ್ರಾರೇ ಕುಲದೇ
ವತಿ| ವಿಪ್ರಾರೆ ತಾಯಿ ತಂದೆ| ವಿಪ್ರಾರೆ ಮೂಲ ಗುರುಗಳು
ಕೋಲೆ|| ವಿಪ್ರಾರೆ ಮೂಲಗುರುಗಳು ಹರಿಗೆಂದು| ಕ್ಷಿಪ್ರ
ದಿಂದಲ್ಲೀ ಹೊಗಳೋರು ಕೋಲೆ || ೧೩ || ನರಕಾ ಕಂಸ
ಹಿರಣ್ಯಾ ಜರಿಜಾರಕಟ ರಂಜಾರ। ಮುರದೊಂಧನಾದಿ ದೈತ್ಯಾರ
ಕೋಲೆ || ಮುರದೊಂಧನಾದಿ ದೈತ್ಯಾರ ಶಿಕ್ಷಿಸಾಲ! ಹರಿ
ಅವತಾರವೆಂದುಹೊಗಳೋರು ಕೋಲೆ || ೧೪ || ಶಿರಿಇಲ್ಲದೆ
ಪಡವ| ಸರುವ ದೇವತೇಗಳ। ತರಿವಾ ದೈತ್ಯಾರ ನಾಯುಧ
ವಿಲ್ಲಾದೆ ಕೋಲೆ|| ತರಿದ ದೈತ್ಯಾರನಾಯುಧ ವಿಲ್ಲಾದೆ ಭಕ್ತ
ರ। ಜರಿದೀರ ಲಾರನೆಂದುಹೊಗಳೋರು ಕೋಲೆ || ೧೫ || ಶ್ರುತಿ
ಗಳು ಹರಿ ಆಜ್ಞಾ। ಸ್ಮೃತಿಗಳ ಹರಿಮಾತು। ಇತರ ಪುರಾ
ಣಾ ಹರಿಲೀಲೆ ಕೋಲೆ|| ಇತರ ಪುರಾಣಾ ಹರಿಲೀಲೆಯನು
ತಾಳಿ| ಅತಿಶಯವಾಗಿಪೊಗಳೋರು ಕೋಲೆ || ೧೬ || ನಿನ್ನಾ
ವನೆಂದಾರೆ। ತನ್ನಾನೇ ಕೊಡುವ ಹರಿ| ಅನ್ಯಥ ತಿಳಿವಾ
ಅಧಮಾರ ಕೋಲೆ|| ಅನ್ಯಥ ತಿಳಿವಾ ಅಧಮಾರ ತಮಸಿ
ನೋಳು| ಬನ್ನಾ ಬಡಿಸೂವನೆಂದುಹೊಗಳೋರು ಕೋಲೆ

|| ೧೭ || ಸ್ಮರಣೆಮಾತ್ರಕ್ಕೆ ಮೂರು ಪುರವಾ ಪುಕ್ಕಟ ಕೊಡುವಾ। ದುರ ಳಾ ಮನುಜಾರೀ ಮಹಿಮೇಯು ಕೋಲೆ|| ದುರುಳ ಮನುಜಾರೀಮಹಿಮೇಯು ತಿಳಿಯುದೇ ನಿರಯಾ ವೈದುವರೆಂಥೊಗಳೋರು ಕೋಲೆ || ೧೮ ||

|| ಶ್ರೀ ಕೃಷ್ಣನ ಸಸೈನ್ಯ ಕರಿಪುರಲುದ್ಯಾನವನ || ಪ್ರವೇಶ ವರ್ಣನೆ

ಭೇರೀಶಂಖ ತಾಳ ತು। ತ್ತೂರೀ ಬಜಂತ್ರೀಸೆಂದು ಆರು ಬಲ್ಲವರಾ ಚಾಮರಾ ಛತ್ರ|| ಆರುಬಲ್ಲವರಾ ಚಾಮರ ಛತ್ರ ಸಂಖ್ಯಾ। ವಾರಿಧಿಘರಿಸಂಘೋಷಾದು ಕೋಲೆ || ೧೯ || ಈ ಪರಿ ಇಂದ ಹಸ್ತಿ। ನಾಪುರವ ಕಂಡೀತು। ಶ್ರೀ ಪತಿಸೈನ್ಯ ಶ್ರೀ ಪ್ರಾಣ ಕೋಲೆ|| ಶ್ರೀ ಪತಿಸೈನ್ಯ ಶ್ರೀ ಪ್ರಾಣದೇವದೂತ। ವ್ಯಾಪಾರ ಮಾಡೂವ ಭರದಿಂದ ಕೋಲೆ || ೨೦ || ವನಜಾ ನಾಭಾನದರಡು। ವನವಲ್ಲಿ ಇಳಿಯುಲು। ವನವರ್ಣವೇನು ಪೇಳುವಕೋಲೆ|| ವನವರ್ಣವೇನು ಪೇಳುವೆಯುನ್ನ ಬದ್ಧಿ ಗನುಸಾವಷ್ಟೀಗಾ ವರ್ಣಿಪೆ ಕೋಲೆ || ೨೧ || ಸುರ ಹೊನ್ನ ಪಾರೀಜಾತ। ಹರಿದಾರ ಚಾರಿವಾಳ ಸರಷ ಸಂಪೀಗಿ ಹಲಸು ಗಿಳಿಮಾಂವು ಕೋಲೆ|| ಸರಸಾ ಸಂಪೀಗಿ ಹಲಸು ಗಿಳಿ ಮಾಂವು ಅಡಕಿ ತೆಂಗು। ಖರ್ಜೂರಸೂಫವಾಳ ಇಪ್ಪೇಯು|| ಕೋಲೆ || ೨೨ || ತಾಳ ಮತ್ತಿ ಅರಿಷ್ಟ। ಸಾಲಾ ಅತ್ತಿ ಅಶ್ವಥ। ಆಲಾ ಮುತ್ತಾದ ಬಸರಿ ಶ್ರೀಗಂಧ ಕೋಲೆ|| ಆಲಾ ಮುತ್ತ

ವ| ೬ಸಾ ಶ್ರೀಗಂಧ ಸೀಬೇಂವುಕ| ಜ್ಯಾಳ ಸುರವಾ ರುದ್ರಾಕ್ಷೀಯು ಕೋಲೆ || ೨೩ || ನೆಲ್ಲೆ ತಾರೀ ಆಣಾಲೆ| ಬಿಲ್ವಾಬೋರೆ ಬೆಳವಾಲು| ಸ್ಫಾಟ್ಯಾಸೀಲಾವ ಬಾಳೆ ನೆಲ ಕಬ್ಬು ಕೋಲೆ || ಸ್ಫಾಲಾ ನೀಲಾವ ಬಾಳೆ ನೆಲು ಕಬ್ಬು ನಿಂಬಿ ಕೇರು| ಚಲುವಾಜಂಬೀರಾವ ತರುಗಾಳು ಕೋಲೆ || ೨೪ || ತಳಿಲೆ ತೋರಣವಾಗಿ| ನೇಳಲೆ ಛಪ್ಪಾರವಾಗಿ| ಫಲಭಾರದಿಂದಾ ಬಲುಬಾಗಿ ಕೋಲೆ || ಫಲಭಾರದಿಂದಾ ಬಲುಬಾಗಿ ಹರಿಪಾವ| ಗಳಿಗೆ ಬೀಳ್ವಂತೆ ಶೋಭೀನೆ ಕೋಲೆ || ೨೫ || ಕರಿಬಿಳಿ ನೈದಲಿ| ಇರವಂತೀಗಿ ಶಾವಂತಿ| ಸರಸೀಜ ಸೌಗಂಧಿ ವ.ಲ್ಲಿಗಿ ಕೋಲೆ|| ಸರಸೀಜ ಸೌಗಂಧಿ ಮಲ್ಲೀಗಿ ಜಾಜಿ ಬಕುಳ ಕುರವಾಕಪುಷ್ಪಾ ಶೋಭಿಸಿ ಕೋಲೆ || ೨೬ || ಸೂಕಾರಂಡಾವು ಚಕ್ರ| ವಾಕಾಸಾರ ಸಾಹಂಸ| 'ಸೂಕೀರ ಪಾರೀವಾಳಾವು ಊ ೕ|| ಸೂಕಿ ರ ಪಾರೀವಾಳಾವು ಕಾಗೀ ಗುಬ್ಯಾ| ನೆ.ಕಾಪ್ಲವಗಾವು ಶೋಭಿ ಸಿ ಕೋಲೆ|| ೨೭ || ೨೪೪

|| ಹರಿಪುರವರ್ಣನಯುಧಿಷ್ಟಿರ ಶಾಸನ ||

ಶ್ರೀಗುರುಭ್ಯೋನಮಃ ಪದ. ರಾಗ. ಸೌರಾಷ್ಟ್ರ ತಾಳ ಝಂಪೆ

ಹಸ್ತೀನ ಪುರದ ಸಮಸ್ತ ಶೃಂಗಾರವು| ವಿಸ್ತರಿಸಲು ಆರಿಂದ ವಶವೊ || ಪಲ್ಲ || ಸುತ್ತಲಿದ್ದಾಗೋಡೀಗೆ| ಸರ್ಪನಹಡಿ ಯಂತೆ| ಹತ್ತು ಸಾವಿರ ತೆನಿತೋರುವವೂ || ೧ || ಕೊತ್ತ ಲಂಗಾಳವು| ನ್ನತ್ತಾಗಿಹವು ಬಲು| ಯತ್ನ ನ್ಹೋಡಿದರೂ|

ವಿಾತಿ ಇಲ್ಲಾ || ೨ || ಹೆಬ್ಬಾಗಿಲೊಳು ಯಡಬಲ|| ದಲ್ಲಿ ಪಾಲ ಕಾರ:| ಅಬ್ಬರಿಸೋರು ಹೋಗಿ ಬಾಹರಿಗೆ || ೩ || ಹಲವು ಮಂದಿಗಳೇ ಕಠಾಲಾದೀ ಹೋಗುತೀರೆ ಗಲಿಬೀಲಿ ನೋಡಲು ಬಲು ವಿಾಗಿಲೂ || ೪ || ಪಚ್ಚೇವಕಲ್ಲಿಲೀದ ನಿರ್ಮಿಸಿರೆ ಕಾಂತೀಯು| ಹೆಚ್ಚಾಗಿ ಕಾಣೀಸೆ ಅಗಸಿಯೊಳು || ೫ || ರಾಜಾಬೀದಿಯು ಪೂಕ್ಕ ವುುಂದತ್ತ ಪೋಗಲು || ಈ ಜೋಡು ಎಲ್ಲಿಲ್ಲವೆನಿಸುವದು || ೬ || ಸಾಲೂ ಸಾಲಂಗಡಿ ಗಳು|| ನೋಡೆ ವಂದೊಂದೆ| ಮೇಲೂ ಮೇಲೆಂದು ಕರಸೂ ವದೂ || ೭ || ಮೊದಲೆ ಶಾಖಾದಂಗಡಿ ತರುವಾಯುದವ ಸಾವು|| ಆದರಿಂದ ಜವೀಯು ಇಟ್ಟಿಹರು || ೮ || ಕಂಭಾ ವತಿಸೂರತಿ ಚಂದ್ರಾಕಾಳೀಯು ಚಿಕ್ಕಿ| ಇಂಬಾದ ಕಿರಿದಾದ ಪೈಠಣಿಯೂ || ೯ || ಕಡ್ಡೀವುಊರಿಗಾ ಘಾಡವಳೀ ಸಣಾನ ಗೀರೂ| ದೊಡ್ಡ ಸಣಾ ಶಾವಂತಿನಾಮಧಾರಿ: || ೧೦ || ಸಹರೂ ದೂದೀ ಹಳದಿ ಬಿಳಪು ಪೊಕ್ಕಳ| ಕುತನಿ|| ಅಸಿತಾ ತಾಪ್ತೀ ಸುಳವು ಬುಗಡೀ ಅಂಚು || ೧೧ || ಉತ್ತಮೋತ್ತಮಳ ಲವಂಗ ಕಾಯಿ ತೆಂಗೂ ಕರ್ಪೂರ| ಹತ್ತೆಂಟು ನಾವಿರ ಫಲ ರಾಸೀ || ೧೨ || ಸಂಣ ಸಂಣ್ಣೀಣಿಯೊಳು ಪಳೆಂಟಂತಸ್ತು ಉಳ್ಳ|| ಉನ್ನತವಾದ ಕ್ರನಾಡವೇಸೊ || ೧೩ || ಹೇಂಗಾಳೆ ರಿಟ್ಟಾಭರಣಾಗಾಳು ನೊಡಲ್ಕೆ|| ಕಂಗಾಳೆ ಸಾಲಾವುಯುನಿ ಸುವದೂ || ೧೪ || ಹಿಂದೆ ಹೇಳೀದೆ ಶೀರಿ ಅಂದಾದ ಕುಪ್ಪಸ: ಛಂವಾವೆ ನನ್ನಲ್ಯ ಕೋಮುಲಿಯಾರಾ || ೧೫ || ನೀಲಾ ಮು

ತ್ತು ಮಾಣಿಕ ಮರಕಾತ ಪುಷ್ಯರಾಗ॥ ಮೇಲೂ ಗೋ
ಮೇಧಿ ವಜ್ರ ವೈಡೂರ್ಯ ॥ ೧೬ ॥ ಇಂತೂ ನವರತ್ನ ಯು
ಕ್ತಾಲಂಕಾರ ವಿಟ್ಟಹಾರು ॥ ಸಂತೋಷಾಂಬುಧಿಯೋಳು
ಯೀಸುವರೂ ॥ ೧೭ ॥ ಅತ್ತತ್ತ ನೋಡಲ್ಲಲ್ಲೆ ವಿದ್ವಾಂಸಾರ
ಮುನಿಗಳ.॥ ಜತ್ತೀಲೆ ಒಂದೇ ಬೀದಿಯೊಳಗಿಹವೂ ॥ ೧೮ ॥
ಎಲ್ಲೀ ನೋಡಾಲು ಮಧ್ವಶಾಸ್ತ್ರವೇ ಪೇಳುವಾರು॥ ಕಳ್ಳಮಾ
ಯಿಗಳ ನಿಂದಿ ಮಾಡುವರು ॥ ೧೯ ॥ ವೀರಾವಮು ಅದ್ಭುತ
ಹಾಸ್ಯಬೀಭ ತ್ಸಭಯ॥ಶೃಂಗಾರಾದಿನವರಸ ಬಲ್ಲವರೂ॥೨೦॥
ಎಲ್ಲಿಯ ು ವೇದ ಘೋಷಯಲ್ಲಿಯು ಮಂಗಳವೇ॥ ಯಲ್ಲಿಯು
ಮದಿವೀ ಮುಂಜಿನಾಮುಕರಣಾ ॥ ೨೧ ॥ ಎತ್ತ ನೋಡಲಾ
ನೀಸಾಲೆ ಎತ್ತ ನೋಡೆ ಕುದರೀಸಾಲೆ ॥ ಎತ್ತ ನೋಡಲಂದ
ಣೇರಿ ಬಾಹ.ವರೀ ॥ ೨೨ ॥ ಆರಾರಾಮುನಿಯ ಮುಂದೆ ತೇರಿ
ಶೃಂಗರಿಸೀಹವು॥ ವಾರಾಂಗನೆರ ಮನಿಗಳೊಂದು ಬೀದಿ
ಗೆ ॥ ೨೩ ॥ ಸಂಜೀಲಿ ಬೆಳಗೀ ಮಲಗಾರು ಪತಿಸೇವೆಯಲ್ಲಿ
ಪ್ಪಾರು॥ ಬಂಜೇರೆಬೊರೊಬ್ಬರಿಲ್ಲಾವಾ ಊರೊಳಗೆ ॥ ೨೪ ॥
ಪಾಂಡೂ ಸುತಾರ ಸಭೆ ಅನೆಂತು ವರ್ಣಿಸಾಲಿ॥ ಮಂಡಾಲ
ದೊಳಗೆಲ್ಲ ಅಪ್ರತಿಯೂ ॥ ೨೫ ॥ ದ್ವಾರಾ ದ್ವಾರಂಗಾಳಲ್ಲಿ
ವಾಜೀ ಮುಖದಿ ಮುತ್ತು ॥ ಸೋರೂತ ವೆಂಬಂತೆ ಕಟ್ಟಿ
ಹರೂ ॥ ೨೬ ॥ ರತ್ನಾವೆತೆತ್ತಿಸೀವೆ ಚೌಕಟ್ಟಿಗಳಿಗೆಲ್ಲ ॥
ಭಿತ್ತಿಗೆ ಚಂದ್ರಕಾಂತಿ ಗ್ಲಾವಗಳೂ ॥ ೨೭ ॥ ಆರೂ ನೋಡ
ಲೂ ರೂಪ ಅವರಂತೆ ತೋರುವವು॥ ಸ್ವಾರಸ್ಯವೇನನಬೇ
ಕಲ್ಲಿ ॥ ೨೮ ॥ ಚೌಕೀಯಲ್ಲೀರೆ ಧರ್ಮ ಭೀಮಾರ್ಜುನಾದೀ

ಗಳು॥ ನಾಕೂದಿಕ್ಕಿಲಿ ಸೇವೆಮಾಡುವಾರು ॥ ೨೯ ॥ ಮುಂ
ದೆನಿಂತು ದೂತರು ಪರಾಕುಯೆಂಬುವಾರು। ನಂದಾದಿಂಚಾ
ಮರ ಬೀಸುವರು ॥ ೩೦ ॥ ಸೊಗಸಿಲಿ ಕಾಷ್ಟಾಧಾರಿಗಳು
ದ್ವಾರಾದಲ್ಲಿ॥ ಬಗೆ ಬಗೇ ಇಂದೆಸ್ಗಾಗಳುವಂತೂ ॥ ೩೧ ॥
ಹರಿಸರ್ವೋತ್ತಮನೆನ್ನದನ್ಯಥ ಪೇಳ್ವಾರ॥ ಕೊರಧೆ ಹಾಕುವೆ
ವೆಂದು ಕೂಗಳುವರೂ ॥ ೩೨ ॥ ಗೋಪಿಚಂದನ ಪಂಚ
ಮುದ್ರೆಯು ಧರಿಸಾದ ॥ ಪಾಪಿಯು ಕೊಲ್ಲುವೆವೆಂಧೊಗಳು
ವರೂ ॥ ೩೩ ॥ ಏಕಾದಶಿಯು ಮಾಡದವರಿಗೆ ಉಣಿಸೂ
ವೆವು॥ ಬೇಕಾದ ಘವಣಿಯೆಂಪ್ಹೊಗಳುವರು ॥ ೩೪ ॥ ಅನ್ಯ
ಸ್ತ್ರೀಯರಿಗಳ ಕೂಡುವರಾರ ನಿದ್ದಾರೆ॥ ಕಂಣಕಿತ್ತಿಸುವೆವೆಂಧೊ
ಗಳುವರೂ ॥೩೫॥ ಮಾತಾಪಿತೃಗಳ ವಂದಾನೆ ಮಾಡಾದವರ॥
ಘಾತಿಸುವೆವುಯೆಂದು ಪೊಗಳುವರೂ ॥ ೩೬ ॥ ಪುರುಷಾರ
ಸೇವೆ ಮಾಡದಂಗಾನೆ ಊರೊಳಗೆ॥ ಇರಸಲ್ಲದೆಂದೂ ಹೊ
ಗಳುವರೂ ॥ ೩೭ ॥ ಸುಳ್ಳ ಕಳ್ಳರಾರನ್ನು ಊರೊಳಗಿದ್ದಾರೆ॥
ಹಲ್ಲ ಕಿತ್ತಿಸುವೆವೆಂಧೊಗಳುವರೂ ॥ ೩೮ ॥ ಪ್ರಾಣೇಶ
ವಿಠ್ಠಲಾನೆ ಪರನೆಂಬಿವರಿಂಮ್ರು॥ ಪಂಚ ಪ್ರಾಣವೆ ನಿಜ
ವೆಂಧೊಗಳುವರೂ ॥ ೩೯ ॥ ೨೮೩ ॥

॥ ಯುಧಿಷ್ಠಿರ ಕೃತ ಶ್ರೀ ಕೃಷ್ಣ ಸತ್ಕಾರ ॥

ಶ್ರೀ ಗುರುಭ್ಯೋನಮಃ ಪದ. ರಾಗ. ಸೌರಾಷ್ಟ್ರ ತಾಳ ಏಕ

ಹರಿಬಲಕೂಡಿ ಕೊಂಡು ನಿಮ್ಮನೋಡ ಬಂದನೆಂದು। ಚರ
ರೂ ಪಾಂಡವರಿಗೆ ಪೇಳೆ॥ ಹರುಷೋದ್ರೇಕಾಗಿ ಬಹು ಭಕು

ತಿಯಿಂದೆಲ್ಲಾರುವಮಂ। ದಿರ ಶ್ರಿಂಗಾರಗಳನು ಮಾಡೆ ॥ ೧ ॥
ಫಲ ಕೈಗಳಲ್ಲಿ ಕೊಂಡು। ಪೊಳ ಲೊಳಿಪ್ಪ ಸರ್ವರುಂಡು।
ಬಲುವೇಗದಿಂದ ಕೂಡಿ ಕೊಂಡೂ। ಜಲಜನಾಭಾ ರುಗ್ಮಿ
ಣಿ ಸತ್ಯಭಾಮೆಯರವಾದ। ನಳಿನಕ್ಕೆ ನಮಿಸಾಲು
ಬಂದೂ ॥ ೨ ॥ ದ್ರೌಪದಿ ಸೂಭದ್ರೆ ಮಿಕ್ಕ। ವಾರು ಪ್ರತ್ತ
ಪ್ರತ್ತ್ಯೇಕಾ॥ ಶ್ರೀ ಪರಮಾತ್ಮಗೊಂದಿಸುವರೂ॥ ಆ ಪಾಂಡೂ
ವಾರಾ ಭಾಗ್ಯ ನೋಡಲಂ ದೀಗೆ ಸಪ್ತ। ದ್ವೀಪಾದವಳಗೆಲ್ಲ
ಮಿಗಿಲೂ ॥ ೩ ॥ ಬಂದರಾಯರಾ ಋಷಿಗಳ ಸಂತೋಷ
ಕೇಳುತಾ। ವಂದಿಸುತಲಿ ಧರ್ಮ ರಾಯಾ॥ ತಾನೂ ಜನ್ಮ
ಕೆ ಸಫಲಾಯಿತು ಧನ್ಯಾದನೆ। ಎಂದೂ ಸದನಾ ಕೈತಂದಾ
ಬ್ಯಾಗಾ ॥ ೪ ॥ ನಾನಾಭೋಜ್ಯ ಪದಾರ್ಥ ಆರೋಗಣೆಯಾ
ಮಾಡಿಸೀದಾನಂತಾರ ತಾಂಬೂಲವೀಯೆ ॥ ಭಾನು ಅಸ್ತ
ಮೀಸೆ ಚಂದ್ರೋದಯ ಬೆಳದಿಂಗಳೊಳು ॥ ಪ್ರಾಣೇಶ ವಿಠ್ಠ
ಲ ಆದ್ಯ್ಯಾಲೆ ॥ ೫ ॥ ೨೮೮ ॥

॥ ರುಗ್ಮಿಣಿ ಸತ್ಯಭಾಮಾ ಸುಭದ್ರಾ ದ್ರೌಪದಿ ಸಂವಾದ ॥

ಶ್ರೀ ಗುರುಭ್ಯೋನಮಃ ಪದ. ರಾಗ ಕೇದಾ ಧನಾ। ತಾ॥ ಆದಿ

ಧಂಡೀ ಧರಡಿಲಿ ತಂದ। ಪಿಂದೇವ ಜವಳೀಯು। ಕೊಂಡು
ಬನ್ನಿಂದೂ ಚರಿಗೆ ಕೋಲೆ ॥ ಕೊಂಡೂ ಬನ್ನಿಂದೂ ತರಿ
ಸೂತ ಶ್ರೀ ಕೃಷ್ಣ। ಪಾಂಡವರಿಗೆ ಕೊಡುತಿದ ಕೋಲೆ॥
॥ ೧ ॥ ಉತ್ತಮ ವಸ್ತ್ರಗಳ। ಸತ್ಯಾಭಾಮೀ ರುಗ್ಮಿಣೀ।
ಮಿತ್ರೆ ದ್ರೌಪದಿಗೆ ಸೂಭದ್ರೆಯರಿಗೆ॥ ಮಿತ್ರೆ ದ್ರೌಪದಿಗೆ ಸುಭ

ಧ್ರಿಯಳೀ(ಗಿತ್ತು || ಮುತ್ತ್ಯಾರಂಥಾಸ್ತ್ಯ ಮಾಳ್ಪರು ಕೋ(ಲೆ
|| ೨ || ನಿಮ್ಮನ ಮೆಚ್ಚಿನಾಲು। ನಿಮ್ಮ ಒಡಹುಟ್ಟಿದವರು।
ಸುವರ್ಮಾನದಿಂದೀ ಸೀ(ರಿಯು ಕೋ(ಲೆ || ಸುವರ್ಮಾನದಿಂದೀ
ಸೀ(ರಿ ಕುಪ್ಪುಸ ತರಿಸಿ ನಮ್ಮ ಕೈಯಿಂದಾ ಕೊಡಿಸೋ(ರು
ಕೋ(ಲೆ || ೩ || ಪಾಲೀ(ಕೊಪ್ಪುಸು ಕಂಠ | ಮಾಲೀ(ಚಿಂತಾ
ಕಪರಡಿ | ತೋ(ಳ(ಬಂದಿಗಿಯೂ ಮುದದಿಂದ ಕೋ(ಲೆ ||
ತೋ(ಳಾಬಂದಿಯೂ ಮುದದಿಂದ ಕೊಡಿಸೋರು || ಅಲಸ್ಯ
ವ್ಯಾಕೆ ಇನ್ನಾರ್ಲೆ ಕೋ(ಲೆ || ೪ || ಏಳೂದ್ವೀ(ಪದೋ(ಳಗೆ |
ಮೋ(ಲಾದ ಸೂ ಮುತ್ತೀ(ಸ | ಜಾಳೀ(ಗಿ ದಂಡೀ(ಸರ ಮುತ್ತು
ಕೋ(ಲೆ || ಜಾಳೀ(ಗಿದಂಡೀ(ಸರ ಮುತ್ತು ಕೊಡಿಸೋ(ರು । ಕಾ
ಲಾಹರಣ್ಯಾಕೆ ಈವ್ಯಾಲೆ ಕೋ(ಲೆ || ೫ || ನಾವೆಲ್ಲ ನೋಂದೆ
ವೆಂದು | ನೀ(ವೇ(ನು ತಿಳಿಯಬ್ಯಾಡಿ | ಭಾವಾಶುದ್ಧಿಯಲಿ
ಪೇ(ಳ್ವೇವು ಕೋ(ಲೆ || ಭಾವಾಶುದ್ಧಿಯಲಿ ಪೇ(ಳ್ವೇವು ಈ
ವ್ಯಾಲೆ || ನೀ(ವೇ(ನೋ(ನಿಮ್ಮ ಹರಿಯೆನೋ(ಕೋ(ಲೆ || ೬ ||
ಹರಿಯು ಮನಸಿನ ಮಾತು | ಬರಿದಾಗಬಾರದೆಂದು | ಅರಿಕೀ(
ಮಾಡಿದೆವೂ ನಿಮಗೀ(ಗ ಕೋ(ಲೆ|| ನಿಮಗೀ(ಗಈವ್ಯಾಲೆ|| ಸಂ
ಬಂವ ಹಾಗೆಮಾಡಿರಿ ಕೋ(ಲೆ || ೭ || ನಿಸಿಕಾಲವಲ್ಲಿ
ದಿವ್ಯ| ವಸನಾ ಭರಣಂಗಳು। ಬಿಸಿಜಾನಾಭ್ಯಾಕೆ ಕೊಡಿಸೂವ
ಕೋ(ಲೆ|| ಬಿಸಿಜಾನಾಭ್ಯಾಕೆ ಕೊಡಿಸೂವಹದನ | ಹೆಂಗಸ
ರಾದ ವ್ಯಾಲೆ ತಿಳಿಯಾದೆ ಕೋ(ಲೆ ||೮|| ತಾ. ವೀ(ಗೆ ಹೋ(ಗು
ತೀ(ವಿ| ನಾವೀ(ಗಪ್ರಾಪದಿ। ನೀ(ವೇ(ನೋ(ನಿಮ್ಮ ಹರಿಯನೋ(
ಕೋ(ಲ||ನಿವೇ(ನೋ(ನಿಮ್ಮಹರಿಯೆ(ನೋಯನುತಾಲಿ। ಕೇ(ವಾ

ಲ ಚರ್ಚೀನಾಳ್ವರು ಕೋಲೆ || ೯ || ಅಂಗಾವು ಕಪ್ಪೆಂದು| ಶ್ರಿಂಗಾರ ಕಾಣೇ ಸಾನೊ | ತಂಗೀಯುರೆಂಬೊನಾ ಚೀಕ್ಯೊ ಕೋಲೆ || ತಂಗೀಯುರೆಂಬೂ ನಾಚೀಕಿಯೊ ಇಷ್ಟೊಂವು | ಅಂಗಾಲಾಚುವೆವೂ ತಿಳಿಸೀರಿ ಕೋಲೆ || ೧೦ || ವಸ್ತ್ರಾಭರ ಣಾವು ನೋಡಿ| ಸತ್ಪಾಪರೀಕ್ಷೆಮಾಡಿ| ಮತ್ತೀ ಕಷ್ಟೇನುಅಷ್ಟಾ ಗೋದು ಕೋಲೆ || ಮತ್ತೀ ಕಷ್ಟೇನು ಅಷ್ಟಾಗೋದೆನಲು ಸೂಭದ್ರಿ ಉತ್ತ್ರಾ ಕೊಡುತಾಳೆ ರುಗ್ಮೀಣೆಗೆ ಕೊಲೆ || ೧೧ || ದೇವಾರ ಪತ್ನಿಯುಂದು | ನಾವೀರ ತಾಳೀ ಕೊಂಡೆ| ಕೇವಾಲ ಭಂಡೀ ಗೊಳಗಾದೆ ಕೋಲೆ|| ಕೇವಾಲ ಭಂಡೀ ಗೊಳಗಾದೆ ಶ್ರೀ ರುಗ್ಮೀಣಿ ನಾವಂದೆ ಮಾತಾ ನಾಡಾಲೆ ಕೋಲೆ || ೧೨ || ಅಂಣಾನೆ ಇರಲಾಗಿ | ಅನ್ಯ ಪುರುಷಾರ ಬಯುಸೀ || ಬನ್ನಾ ಬಟ್ಯ್ಯಾಕೆ ಬರಬೇಕು ಕೋಲೆ || ಬನ್ನಾಬಟ್ಟ್ಯಾಕೆ ಬರಬೇಕೆ ಶ್ರೀ ರುಗ್ಮೀಣಿ || ನಿನ್ನಾ ಬುದ್ಧೀಗೆ ಯೇನನಬೇಕು ಕೋಲೆ || ೧೩ || ದೇಶಾಧಿ ಪತಿಯುಂದು | ನಾನೋತೆನಲ್ಲಾವೆ | ದೇ ಸೀಕಿ ಜನರಾ ಅಂಜಿ ಕಿ ಕೋಲೆ || ದೇಸೀಕಿಜನರಾ ಅಂಜಿಕಿ ಲ್ಲವಲೆ ಸಾ | ನ್ಯಾಸೀ ಓಂವೇನು ಬರಲಿಲ್ಲ ಕೋಲೆ || ೧೪ || ಶ್ರೀನಂತ ರಾಯರ | ಸ್ತೋತ್ರಮಾಡ ಕೂಡಿ | ಶ್ರೀ ಮಾಹಂ ಕಾಳಿ ಪೂಜೀಸಿ ಕೋಲೆ || ಶ್ರೀ ಮಾಹಂಕಾಳೀ ಪೂಜೀಸಿ ಗಂ ಡಾನ | ನೇಮೀಸಿದ್ಧಿಲ್ಲಾಯೆನಗಾರು ಕೋಲೆ || ೧೫ || ಯು ಲ್ಲ್ಯಾದರೇನು ಒಬ್ಬ | ನಲ್ಲೀವ ಗತಾನ ಮಾಳ್ಪೆ | ನಲ್ಲಾ ರೈಮು ಮಂದೀ ವಲಿಸೀದಿ ನೇನೆ | ಅಲ್ಲಾದೆ ಬಹುಮಂದ್ರಿ ವಲಿಸೀದಿನೆ ಸೂಭದ್ರಿ | ಯುಲ್ಲಿ ಕಲಿತಿದ್ದೆ ಬಹುಮಾತ

ಕೋಲೆ ॥ ೧೬ ॥ ಐವಾರಾದರು ಸದ್ಗ । ಗವತಾರು ಚಿಂತಿಲ್ಲ
ಕೇವಾಲ ಮಂದವುತಿಗಳ ಕೋಲೆ ॥ ಕೇವಾಲ ಮಂದವುತಿ
ಗಳ ವಲಿಸೂವದು। ದೇವೇರಿಗೆನ, ಉಚಿತಲ್ಲ ಕೋಲೆ ॥ ೧೭ ॥
ಮಂದಾರಿ ಗೊಲಿದಾರೆ। ಸಂದೇಹವಿಲ್ಲದಯು । ಸಿಂಧೂ
ಯಂಬುವರು ನಿವ್ಮೃಕ್ಕ ಕೋಲೆ ॥ ಸಿಂಧೂಯಂಬುವರೂ
ನಿವ್ಮೃಕ್ಷ ಆವಕುಲ ವೇದೂ ತಿಳಿಯದೆ ರಮಿಸೋಳು ಕೋಲೆ
॥ ೧೮ ॥ ಕುಲಹೀನರೆನ್ನ ದಾಲೆ। ಒಲಿದ, ರಕ್ಷಿಸ,ವದು ಬಲು
ಕೀರ್ತಿ ಭುವನವೊಳಗೆಲ್ಲ ಕೋಲೆ॥ ಬಲುಕೀರ್ತಿ ಭುವನ
ದೊಳಗೆಲ್ಲ ಬಡವಾರಿ। ಗೊಲಿದು ಕೆಡಿಸೋದು ಅನ್ಯಾಯ
ಕೋಲೆ ॥ ೧೯ ॥ ಅಡಗೀದ್ಯಾಕೆ ದ್ರೌಪದಿ । ಹುಡಿಗಿ
ಬಾಯಿಲುಣುತಿದ್ದಿ । ಬಡ ಬಡ ಹೇಳನ್ಯಾಯಾವ ಕೋಲೆ ॥
ಬಡ ಬಡ ಹೇಳೆ ನ್ಯಾಯಾವ ಬಲ್ಲ ಐವ । ರೊಡನೆ ಯಂತಿ
ದ್ದೆ ಅನುದಿನ ಕೋಲೆ ॥ ೨೦ ॥ ದಿನವೊಳಗೈವಾರೋದಿನ
ದೀನ ಕೊಬ್ಬಾರೊ । ಯನಗೆ ತಿಳಿಸುವವೇ ದ್ರೌಪದಿ ಕೋಲೆ॥
ಯನಗೆ ತಿಳಿಸುವದೆ ದ್ರೌಪದಿ ಈ ಮಾತು । ಅನುವಮಾನಾ
ಬಹಳಾ ಮನಸಿಗೆ ಕೋಲೆ ॥ ೨೧ ॥ ಅನುಮಾನ ಬಿಡಿಸ
ಲಿಕ್ಕೆ । ಚಿನಿವಾರರಿರಬೇಕು । ಅನಳೀರಬೇಕು ವರಿಗಲ್ಲು
ಕೋಲೆ ॥ ಅನಳೀರಬೇಕೂ ವರಿಗಲ್ಲಿಷ್ಟಿಲ್ಲಾದೆರು । ಗ್ಮ್ರಣಿ
ಯಂತು ಬೀಡಿಸಾಲನು ಮಾನ ಕೋಲೆ ॥ ೨೨ ॥ ದೇವಿಮಾ
ತಾಡೂತೊಂದು । ಝಾಂವು ಆಯಿತು ಸತ್ಯ । ಭಾವೀನೀ
ಯ್ಯಾಕೆ ಮೌನಾವು ಕೋಲೆ ॥ ಭಾಂವಿನೀ ಯ್ಯಾಕೆ ಮೌನೆಂ
ದು ಕಂಣು ಸೊನ್ನಿ । ದೇವೇಶ ಮಾಡೀದ ಮುದದಿಂದ

ಕೋ೯ಲೆ || ೨೩ || ಹರಿಯೋ ಬಲವಾದವನೆಂದು | ಕಿರಿನಗಿನ ಗುತಾಲಿ | ಶಿರಿ ಸತ್ಯಭಾಂವೀ ದ್ರೌಪದಿ | ಕೋ೯ಲೆ || ಶಿರಿ ಸತ್ಯಭಾವಿದ್ರೌಪದೀ ಗಂಜೂವನು| ಹರಿದಾಸರೆಲ್ಲಾ ಕೇಳೀರಿ ಕೋ೯ಲೆ || ೨೪ || ಬೆನ್ನು ತಿಂಡಿಕ್ಕಿದಾರೆ | ಕಾಣು ತುರಿಸೀ ಕೊಂಡಾತೆ| ಚನ್ನೆದ್ರೌಪದಿ ಚಿನಿವಾರ ನ್ಯಾಕೆ ಚನ್ನೆದ್ರೌಪದಿ ಚಿನಿವಾರನಳರಿಬ್ಬ/ ಎನ್ನೇಸು ಮಾದಿ ಬೇಕವ್ವಕೊ.ಲೆ ||೨೫|| ಅಕ್ಕ ಮಾತಾಡಳೆಂದು/ ಚಿಕ್ಕಾಕಿನ್ಯಸಿಕೊಂಡ್ಯಾ / ಘಕ್ಕಾನೆ ಬಂದೂ ಸೈ ಸೈಯು ಕೋ೯ಲೆ॥ ಘಕ್ಕಾನೆ ಬಂದು ಸೈ ಸೈಯ್ಯ ಚಿನಿವಾರ| ಜೊಕ್ಕಾ ಬಂದಾಕ್ಕೆ ಮೆಚ್ಚ್ಯೋರು ಕೋ೯ಲೆ || ೨೬ || ಮೆಚ್ಚ್ಯಾದಿದ್ವಾರ ಬಹು ರಜ್ಜೀಯು ಮಾಡುವಾರೆ ಹೆಚ್ಚ್ಯಾಗಿ ಸಭಿಗೆಯುಳಿವಾರೆ ಕೋ೯ಲೆ || ಹೆಚ್ಚ್ಯಾಗಿ ಸಭಿಗೆ ಯುಳಿವಾರೆ ದ್ರೌಪದಿ। ಮುಚ್ಚಿಕೋ ಇನ್ನ್ಯಾ ಆ ಮಾತು ಕೋ೯ಲೆ || ೨೭ || ಗಂಡ ನೆ ಎ.ರಲಾಗಿ | ಗಂಡೂ ಗಜ್ಜೀಯು ಹಾಕಿ | ಗಂಡೀಸಿನಂತೆ ಕಾದಾಲು ಕೋ೯ಲೆ ॥ ಗಂಡೀಸಿನಂತೆ ಕಾದಾಲು ಹೆಂಗಸೀನ | ಕಂಡಾಸರೆಲ್ಲಾನಗುವಾರು ಕೋ೯ಲೆ || ೨೮ || ಪುರುಷಾರಾನೀಯು ಬಿಟ್ಟ್ಯ | ಪರಪೀಗೆ ಪ್ಯಗೊಟ್ಯು ನೆರಮುನಿಯುಲ್ಲೀವಾ ಸಾವು ಕೋ೯ಲೆ || ನೆರಮುನಿಯುಲ್ಲೀವಾ ಸಾವು ಮಾಡೋದು ಹೆಂಗ| ಸರಿಗನುಮಾನಾ ದ್ರೌಪದಿ ಕೋ೯ಲೆ || ೨೯ || ಹೆಂಗೀ ಈ ಸಭೆಯೊಳು ಇನ್ನಾರ ಬಲ ವಿಲ್ಲ | ಅಂಗಾನ ಸಲಿಗೀ ಬಹಳಾಗಿಕೋ೯ಲೆ || ಅಣ್ಣಾನ ಸ ಲಿಗೀ ಬಹಳಾಗಿ ಸತ್ಯ ಭಾಂವಿ | ಯನ್ನ ಕೂಡಿಂತೂ ನುಡಿ ವೆಲ್ಲ ಕೋ೯ಲೆ ॥ ೩೦ ॥

॥ ಶ್ರೀ ಕೃಷ್ಣ ಪಾಂಡುವರ ಸಂವಾದ ॥

ಹೆಂಡಾರ ಪ್ರೇಮ ಕಳುವ ಕಂದಾ ಸಂತೋಷದಿಂದ । ಪುಂಡ
ರೀಕಾಕ್ಷ ನಗೆ ಮೊಗ ಕೋಲೆ ॥ ಪುಂಡರೀಕಾಕ್ಷ ನಗೆ
ಮೊಗವಾಗೆ ವೀರ । ಗಂಡಾ ಅರ್ಜುನನೂ ಇಂತೆಂಬ
ಕೋಲೆ ॥ ೩೧ ॥ ಮೀನಾಕ್ಷಿ ದ್ರೌಪದಿಯು । ನೀನೋಡಿ
ನಗುತಿದ್ದಿ । ಏನು ಭ್ರಮಿಸೀದಿಯೋ ಮನದೊಳು ಕೋಲೆ ॥
ಏನು ಭ್ರಮಿಸೀದಿಯೋ ಮನದೊಳು ಕೃಷ್ಣ ಅನು । ಮಾನ
ವಾಗೀದೆ ಯಮಗೀಗ ಕೋಲೆ ॥ ೩೨ ॥ ಜಾರ ಪುರುಷಾರ
ಗೆ ವಿಚಾರಾವೆಲ್ಲೀವಾವೀದೂ । ಮಾರನ ಪಿತನು
ನೀಮೊಲಾಗಿ ಕೋಲೆ ॥ ಮಾರನಪಿತನು ನೀ ಮೊಲಾಗಿ
ಯನಲು ಕಂ । ಸಾರಿ ಅರ್ಜುನಗೆ ಇಂತೆಂಬ ಕೋಲೆ
॥ ೩೩ ॥ ಪುಂಸತ್ವ ವಿಲ್ಲಿದವರು । ಸ್ತ್ರೀಸುತ ಮಾನಿಯಂದು ।
ಸಂಸಾರವೆಂತೂ ಮಾಳ್ಪರು ಕೋಲೆ ॥ ಸಂಸಾರವೆಂತೂ
ಮಾಳ್ಪರೊಯೆಂದು ಸ್ಮರಿಸಿ । ದೇಸವ್ಯಸಾಚೀನ ನಗಿಬಂತು
ಕೋಲೆ ॥ ೩೪ ॥ ಎಲ್ಲೀ ಮಸಿಮಾರು ಪುಂಸ್ತ್ವ । ವಿಲ್ಲಾದ
ವರೀಗೆ ಊರ್ವೀಸಿಲ್ಲಾದೆ ಖಳರಾಭಯದಿಂದ ಕೋಲೆ ॥
ನಿಲ್ಲಾದೆ ಖಳರಾಭಯದಿಂದ ಪೋಗಿ ಜಲಧಿ । ಯಲ್ಲೀ ಸೇರು
ವದೆ ಉಚಿತಾವು ಕೋಲೆ ॥ ೩೫ ॥ ಕಾದಿಗೆಲುವಾದೆ ಗುಣ
ಓ । ಧ್ಯೋದಾರಾ ಮತ್ತು ಸುಗುಣ । ಬಾಧೀಸ ಬಂದಾ ವೈರಿ
ಯ ಕೋಲೆ ॥ ಬಾಧೀಸ ಬಂದ ವೈರಿಯಮುಂದೆ ನಿಂತು ।
ರೋದಾನ ಮಾಡೂದುಚಿತಲ್ಲ ಕೋಲೆ ॥ ೩೬ ॥ ಗೊಳೀ

ಯು ಕೂಡ ಕಾದಿ । ಸೋಲಿಸಿದವನೆ ಬಂಟಾ ಮೇಲಾಗಿ
ಹೆಂಗಸಿನ ಕೊಂದೂ ಕೋಲೆ ॥ ಮೇಲಾಗಿ ಹೆಂಗಸಿನ
ಕೊಂದು ಬದಕೂವವ । ಭೂಲೋಕ ದೊಳಗೆ ಬಲು
ಬಂಟ ಕೋಲೆ ॥ ೩೭ ॥ ಅನ್ಯಾಯವೆ ಕಂಡರೆ ಹೆಣ್ಣಾ
ದರುಚಿಂತಿಲ್ಲ ಚನ್ನಾಗಿ ಶಿಕ್ಷೆಯುಮಾಡೊದೆ ಕೋಲೆ ॥
ಚನ್ನಾಗಿ ಶಿಕ್ಷೆಯು ಮಾಡೋದೆ ಪುರುಷಾರು ।
ಹೆಣು ವೇಷಾಗೊದೆ ಬಲುಘಂಡು ಕೋಲೆ ॥ ೩೮ ॥ ಹೊ
ಟ್ಟೆಗಾಗೀ ಸ್ತ್ರೀವೇಷಾ । ತೊಟ್ಟರೊವೆಕ್ಕೆ ಚಿಂತಿಲ್ಲ । ಬಿಟ್ಟು
ಬಿಡವಲೇ । ಬಲುಭಾರಿ ಕೋಲೆ ॥ ಬಿಟ್ಟು ಬಿಡವಾಲೆ ಬಲು
ಭಾರಿ ಹೆಂಣ್ಣಾಗೋದು । ಕೆಟ್ಟ ಕರ್ಮವು ಪುರುಷಾಗೆ
ಕೋಲೆ ॥ ೩೯ ॥ ಪನತಿಯಾ ವೇಷಾವು ಒಬ್ಬಸೆಯಾದಾ
ರೆ ಚಿಂತಿಲ್ಲಿ । ಮುನಿಯೊಳಗೆಲ್ಲಾರು ಸ್ತ್ರೀವೇಷ ಕೋಲೆ ॥
ಮುನಿಯೋಳಗೆಲ್ಲರು ಸ್ತ್ರೀವೇಷ ತಾಳಲು ಕುಂ । ಭಿಣಿಯೊ
ಳಗಾರು ಮೆಚ್ಚಾರು ಕೋಲೆ ॥ ೪೦ ॥ ಅಪಾರಾಗಾಲಿ
ಮಂಜ್ರು । ಭೇದಾ ಮಾಡಾ ಬಾರಾದು । ಮೇದಿನಿಯೊಳಗೆ
ಬಲುಪಾಪ ಕೋಲೆ ॥ ಮೇದಿನಿಯೊಳಗೆ ಬಲುಪಾಪ ವೆಂಬ
ದು ಆದದ್ದಾಯಿತು ಇನ್ನೇನು ಕೋಲೆ ॥ ೪೧ ॥ ಎಡಿಗೆ ಭೇ
ದಾವ ಮಾಡಿ । ಒಡಿಸಿದಾವು ಚಿಂತಿಲ್ಲ । ಒಡದು ಪ್ರಾ
ಣಾವ ಕೊಳಬಾರದು ಕೋಲೆ ॥ ಒಡದು ಪ್ರಾಣವಾ
ಕೊಳಬಾರದೆನಲು ಸ್ವಾಮಿ ಒಡನೇಆಡುವನೂ ಶ್ರೀ
ಭೀಮ ಕೋಲೆ ॥ ೪೨ ॥ ಅಳಿದಾರೆ ಪಾಪೊ ಪ್ರಾಣಾ ಉಳಿ

ಸೀದಾರೆ ಪುಣ್ಯವೊ | ಬಲು ಮಂದಿ ತಿಳಿಯೂವ ನ್ಯಾಯೂವು ಕೋಲೆ ॥ ಬಲು ಮಂದಿ ತಿಳಿಯೂವ ನ್ಯಾಯೂವಬಲ್ಲ ರನ್ನಾ | ಕಳಕರಕಾಯಿವೂ ಹುಡುಗಾರು ಕೋಲೆ ॥ ೪೩ ॥ ಬಿಟ್ಟೊ ಕೊಡಾವೂತೀಗ | ಎಷ್ಟೊನೂಪಸ್ತಲವಣ । ಎಷ್ಟಾ ಕಬೇಕೊ ತಿಳಿಯಾದು ಕೊಲೆ ॥ ಎಷ್ಟಾಕ ಬೇಕೋ ತಿಳಿಯೂ ದು ಬಲ್ಲರೆವಂ । ದಿಷ್ಟೊ ವೇಳುವದೂ ಯುವಃಗೀಗ ಕೋಲೆ ॥ ೪೪ ॥ ಸಿದ್ಧವಾದದ್ದು ಬಿಟ್ಟು । ಕದ್ದು ತಿಂಬುವರಂತೆ ನಿದ್ಧೀತು ರುಚಿಯು ಅದರೊಳು ಕೋಲೆ ॥ ಎನಿದ್ಧೀತು ರುಚಿ ಯು ಅವರೋಳು ಕೃಷ್ಣ ನೀ | ಬುದ್ಧೀವಂತನಾದರಿದು ಪೇಳು ಕೋಲೆ ॥ ೪೫ ॥ ಅದಕಿಂತ ಬಲು ರುಚಿ | ಮಧು ಕಾರ ವೇಂವಾರೊ ॥ ಅದು ಪರಿಚಿತಿಯೂ ಉಂಟೇನೊ ಕೋಲೆ ॥ ಅದು ಪರಿಚಿತಿಯು ಉಂಟೇನೊಬಲ್ಲಾರೆ | ಅದ ಕೇನು ಚಿಂತಿಪೇಳೀಗ ಕೋಲೆ ॥ ೪೬ ॥ ಒಮ್ಮೆ ಇಲ್ಲೆಂದವಾರೆ ಮ | ತ್ತೊಮ್ಮೆಬೇಡುಂಬೂವನು | ಧರ್ಮವಲ್ಲವು ಬಹು ಕಾರ್ಪಣ್ಯ ಕೋಲೆ ॥ ಧರ್ಮಾವಲ್ಲವು ಬಹು ಕಾರ್ಪಣ್ಯ ದೋಷ ಮುನಿ | ಸಮ್ಮಾತ ವಲ್ಲಾವು ಈ ಮಾತು ಕೋಲೆ ॥ ೪೭ ॥ ಭಂಡೀ ತುಂಬನ್ನೊಬ್ಬಾನೆ | ಉಂಡಾ ನೇಂಬೂವರೆಂಥಾ । ದಿಂಡ್ಯಾನಾಥಾನೊ ಅವ ತಿಳಿಯಾದು ಕೋಲೆ ॥ ದಿಂಡ್ಯಾನಾಥಾನೊ ಅವ ತಿಳಿಯಾದು ಎಲ್ಲೆಲ್ಲಿ | ಕಂಡಾ ಮಾತಲ್ಲೀದು ಆಶ್ಚರ್ಯ ಕೋಲೆ ॥ ೪೮ ॥ ಆರಾರಿ ಗನ್ನತವ್ಮಾ। ಹಾರಾವಿಸ್ತಷ್ಟು ಮತ್ತು | ನೂರೂ ಭಂಡೀ

ಉಂಡಾರು ಚಿಂತಿಲ್ಲ ಕೋಲೆ ॥ ಸೂರೂ ಭಂಡೀ ಉಂಡಾರು
ಚಿಂತಿಲ್ಲ ಜಗಗೋಳು ಜಾರಾ ಚೋರಾತನವೆ ಬಲುಹೀನ
ಕೋಲೆ ॥ ೪೯ ॥ ರಜ್ಞಾನಿ ಆಸ್ವಾವದು ಕಜ್ಜ್ಯಾಲಾತಿಯು
ಮಾತು ತಕ್ಕದ್ದು ಅಲ್ಲ ಸುಜನಾಗೆ ಕೋಲೆ ॥ ತಕ್ಕದ್ದು ಅಲ್ಲಾ
ವು ಸುಜನಾಗೆ ಜನರೆಲ್ಲ । ನಕ್ಕೂ ಪರಿಹಾಸ್ಯಾ ಮಾಡೋರು
ಕೋಲೆ ॥ ೫೦ ॥ ಪಂಕಾಜ ಮುಖಿ ಆಕ । ಶಂಕಾಶಾದಾ
ರಾಯಿತು । ಶಂಕಾ ಮಾಡುವರೆ ಕುಲಗೋತ್ರ ಕೋಲೆ ॥ ಶಂಕಾ
ಮಾಡುವರೆ ಕುಲಗೋತ್ರ ವೈಯುಲ್ಲ ಡೊಂಕಾದ ಕೊಂಡೆ
ಸಲ್ಲಾದು ಕೋಲೆ ॥ ೫೧ ॥ ದೊಡ್ಡವರಾದವಾರು । ಗುಡ್ಡಾ
ಕಿತ್ತ್ಯಾಕುವದು । ಮಡ್ಡಾ ಕೆಲಸವೆ ತನಬೇಕು ಕೋಲೆ ॥
ಮಡ್ಡಾ ಕೆಲಸವೇ ತನಬೇಕು ತನರನ । ವಡ್ಡರೆಯುಂದು
ತಿಳಿವೋದು ಕೋಲೆ ॥ ೫೨ ॥ ಕತ್ತೀದಾರು ಚಿಂತಿಲ್ಲ । ತತ್ತರೀ
ಸಾದಾಲೆ ॥ ಹೊತ್ತು ನಿಲ್ಲುವದು ಬಲು ಹೆಚ್ಚು ಕೋಲೆ ॥
ಹೊತ್ತು ನಿಲ್ಲುವದೂ ಬಲು ಹೆಚ್ಚು ಡಚ್ಚರಕಿಂತ । ಅತ್ತತ್ತ ವೆಂದು
ತಿಳಿವೋದು ಕೋಲೆ ॥ ೫೩ ॥ ಮದಿವಿಲ್ಲದವನಗ್ನ ವಧುಗಾಳನೋ
ಡುವದು । ಹವನಲ್ಲಿ ಪಾಪ ಕರ್ಮವು ಕೋಲೆ ॥ ಪದನಲ್ಲಿ ಪಾಪಾ
ಕರ್ಮಾವು ಈ ಮಾತು । ಬುಧಜನರೆಲ್ಲ ಮೆಚ್ಚಾರು ಕೋಲೆ
॥ ೫೪ ॥ ಚನ್ನೀಗದ ಸ್ತ್ರೀರೂಪ । ವನ್ನು ನೋಡಿದ ಮಾತ್ರ ।
ಸನ್ಯಾಸಿ ರೇತಸ್ಸು ಜಿಗಳಾಲು ಕೋಲೆ ॥ ಸನ್ಯಾಸಿರೇತಸ್ಸು ಜಿ
ಗಳಾಲು ದಿಗ್ಭಲಿ । ಯನ್ನೀ ಮಾಡಬೇಕೆಂದು ಋಷಿವಾಕ್ಯ ಕೋಲೆ ॥
॥ ೫೫ ॥ ಶ್ರೀ ಚಕ್ರವರ್ತಿಗಾಳು । ನಾಚಕೀಯನು ಪಟ್ಟು

ಆಚಾರ್ಯರಾಗೂವದು ಬಲು ಹೀನ ಕೋಲೆ ॥ ಆಚಾರ್ಯ ರಾಗುವದು ಬಲುಹೀನ ಅದು ಕೇಳಿ|ಆಚೀಯುರಾಯುರು ನಕ್ಕಾರು ಕೋಲೆ ॥ ೫೬ ॥ ಅರಸೀನವುಕ್ಕಳಾಗಿ । ಧೊರೆತಾನ ಮಾಡದೆ । ಧರಣೀದೇವತಿಗಾಳಾಳಾಗಿ ಕೋಲೆ ॥ ಧರಣೀ ದೇವತಿಗಾಳಾಳಾಗಿ ಅವರಕೊಡ। ತಿರಕೀಘೋಗುವದೂ ಮಾನಲ್ಲ ಕೋಲೆ ॥ ೫೬ ॥ ಕುಪರೀಗೆ ರೋಗ ಬಂದ। ರದ ರೌಷಧವಾಪ್ರೋಮೊ । ಅದು ಬಲ್ಲ ಜಾಣಾ ಪುರುಷಾನು ಕೋಲೆ ॥ ಅದು ಬಲ್ಲ ಜಾಣಾ ಪುರುಷಾನ, ನಿತ್ಯಾ ನಮ್ಮ । ಬದಿಯಲ್ಲಿರಬೇಕೂ ಸಿಗವಲ್ಲ ಕೋಲೆ ॥ ೫೭ ॥ ಪೂಡವೀಯುಒಳಗಿದ್ದ । ಗಿಡಗಾಳೆಲ್ಲಾವು ಬಲ್ಲ । ಅಡವೀಯ ಗೊಲ್ಲಾರೆ ಇರಲಾಗಿ ಕೋಲೆ ॥ ಆದವೀಯು ಗೂಲ್ಲಾರೆ ಇರಲಾಗಿ ವೈದ್ಯನ । ಹುಡುಕೂವದ್ಯಾಕೆ ಸಿಗನೆಂದು ಕೋಲೆ ॥ ೫೯ ॥ ಕೋಟೀವಂಡಿಪ್ಪಾರು । ತೋಟಾವಾಒಳಗೇವೆ । ಈತಾವಿಲಾದೂ ದಿಕ್ಕಿಲ್ಲ ಕೋಲೆ ॥ ಈರಾವಿಲಾರೂ ದಿಕ್ಕಿಲ್ಲ ಕೃಷ್ಣ ನಿನ್ನ । ಲಾಠೀ ಅವಲಕ್ಕೀಮಾಡೋಣ ಕೋಲೆ ॥ ೬೦ ॥ ಮರುತಾ ನಿಂದಾಡೂವ । ಸರಸಾವ ಮಾತು ಕೇಳಿ । ಖರಿಯಾವಾಗೆ ಬಡಿದಿಯುಪ್ಪಾ ನೀಕೋಲೆ ॥ ಖರಿಯಾವಾಗೆ ಬಡದಿಯುಪ್ಪಾ ನೀನೆಂದು ಶ್ರೀ । ಪರಮಾತ್ಮ ಬಹಳಾ । ನಗುತೀಹ ಕೋಲೆ ॥ ೬೧ ॥ ಅವರಾವರಾಡೊದು। ಇವರೀವ ರಂಬೂವದು। ದಿವಿಜೇಶನಗುವದು ನೋಡುತ ಕೋಲೆ ॥ ದಿವಿಜೇಶನಗುವದು ನೋಡುತ ಧರ್ಮರಾಯು । ಖವಖಾವನಗುತಾನೆ ಸಭೆಯೋಳು ಕೋಲೆ

|| ೬೨ || ಲೋಕೈಕನಾಥಾನು | ಲೋಕಾರೀತಿಯ ಮಾಳ್ಪಾ |
ಈ ಕೌತೂಕವಾ ನೋಡಿರೆಲ್ಲಾರು ಕೋಲೆ॥ ಈ ಕೌತೂಕಾ
ವ ನೋಡಿರೆಲ್ಲಾರು ಯಿಂದಾಗ | ನಾಕಾಜನರೆಲ್ಲಾ ನಗು
ತೀರೆ ಕೋಲೆ || ೬೩ || ಭೀಮಾರ್ಜುನಾರು ಕೂಡಿ। ಸ್ವಾಮೀ
ಯಪಾದ ಯುಗ | ತಾವುರಸಗಳೀಗೆರಗಾಲು ಕೋಲೆ ||
ತಾವುರಸಗಳೀಗೇರಗಾಲು ಹರುಬಹು | ಪ್ರೀಮಾ ದಿಂದೆತ್ತಿ
ಅಪ್ಪೀದ ಕೋಲೆ ॥ ೬೪ ॥ ಮುಂದಾಗಮುನಿ ಮುಂಯ್ಯಾ |
ತಂದ ಕಾರಣಾ ನಿಮ್ಮ | ನಿಂಮೂ ನೋಡಿದೆ ನೀಗ ಕಂಣ್ಣಾ
ತುಂಬಿ ಕೋಲೆ || ಇಂದೂ ನೋಡಿದೆ ಕಂಣು ತುಂಬೀಗ
ತಾಯಿ ತಂದಿ । ಬಂಧೂ ಬಳಗೆಂವಾರೆ ನೀವೆ ೀವೆ ಕೋಲೆ||
॥ ೬೫ || ಶರಣಾ ವತ್ಸಾಲನೆಂಬೊ । ಬಿರಿದೀಗೆ ತಕ್ಕ ಮಾತು।
ಹರಿ ಆಡುತಿರಲು ಕೇಳುತ ಕೋಲೆ ॥ ಹರಿ ಆಡುತಿರಲು
ಕೇಳುತ ಪಾಂಡುವರೂ || ಹರುಷಾಬ್ಧಿಯಲ್ಲೀ ಮುಳಗೂತ
ಕೋಲೆ || ೬೬ || ಕರವೂ ನೆನಿಸೀಕೊಂಡು | ತುರವೂ ತಾನೆ
ಬಂದಂತೆ | ಪರಮಾತ್ಮನೀನೆವೆಯ ಮಾಡಿ ಕೋಲೆ || ಪರ
ಮಾತ್ಮನೀನೆವೇದಯಮಾಡಿ ಬಂದ್ಯೆ ಮ್ಮ | ಧ್ಧರಿಸೆದ್ಯೋಯಂ
ದ್ಧು ತುತಿಸೋರು ಕೋಲೆ ॥ ೬೭ ॥ ಪಾಹೀ ಪಂಕಜ
ನಾಭ । ಪಾಹೀವಾಸವಾನೂಜ | ಪಾಹೀದಯಾಳು ಸರ್ವ
ಜ್ಞ ಕೋಲೆ ॥ ಪಾಹೀದಯಾಳು ಸರ್ವಜ್ಞಸರ್ವೇಶಾ ಪಾಹೀ
ಮಾಧಾವಯೆಂದು | ತುತಿಸೋರು ಕೋಲೆ || ೬೮ || ಶ್ರೀ
ಪಾಂಚಾಲೆ ಸೂಭದ್ರಿ । ಮಾಪತಿಗೊಂದೀಸುತ | ಹೇಪರ

ಬ್ರಹ್ಮ ಕರೂಣೀಸೂ ಕೋ॥ಲೆ ॥ ಹೇಪರಬ್ರಹ್ಮ ಕರೂಣೀ
ಸೊಯುಂದಿಬ್ಬ । ರೂಸವೆಪದಿಗೇ ತುತಿಸೋ॥ರು ಕೋ॥ಲೆ
॥ ೬೯ ॥ ಉದ್ಧಾರ ಮಾಡಿದೆಷ್ಟು! ಮಧ್ವಾವಲ್ಲಾಭಸಾದ ।
ಪದ್ಮ ದರುಶನವು ಇಂದಿತ್ತು ಕೋ॥ಲೆ ॥ ಪದ್ಮಾ ದರುಶನವೂ
ಇಂದೀತ್ತು ಯುನುತಾಲಿ ಬುದ್ಧೀ ಪೂರ್ವಕದೀ ಪೊಗಳೋ॥ರು
ಕೋ॥ಲೆ ॥ ೭೦ ॥ ಜಯುತೂ ಜಗತ್ಪಾಲ। ಜಯುತೂ ಜನಾರ್ದ
ನ । ಜಯುತೂ ಮಂಗಾಳ ಮೂರ್ತಿ ಜಯು ಪುಣ್ಯ ಕೀರ್ತಿ ॥
ಜಯುತೂ ಮಂಗಾಳಾ ಮೂರ್ತಿ ಜಯು ಪುಣ್ಯಾ ಕೀರ್ತಿಂದು
ವಿ । ನಯುದಿಂದ ಬಹಳಾ । ತುತಿಸೋ॥ರು ಕೋ॥ಲೆ ॥ ೭೧ ॥
ನೀನೇ ಸರ್ವ ಸ್ವತಂತ್ರ ನೀನೆ ತ್ರಿಜಗದ್ವ್ಯಾಪ್ತ । ನೀನೆ
ತ್ರಿಜಗದ್ಭಿನ್ನ । ಬಲ ಪೂರ್ಣ ಕೋ॥ಲೆ ॥ ನೀನೆ 'ತ್ರಿಜಗದ್ಭಿನ್ನ
ಬಲಪೂರ್ಣ ನಿರ್ಲಯು । ಪ್ರಾಣೇಶ ವಿಠಲಾಯುನಲಾಗಿ
ಕೋ॥ಲೆ ॥ ೭೨ ॥ ೩೬೦ ॥ ಶ್ರೀ ಮಧ್ವೇಶ ಕೃಷ್ಣಾರ್ಪಣ-

॥ ಶ್ರೀಕೃಷ್ಣಕೃತ ಭೀಮಸೇನ ದ್ರೌಪದಿ ಭಕ್ತಿ ವರ್ಣನೆ ॥

ಶ್ರೀ ಗುರುಭ್ಯೋನಮಃ ರಾಗ, ಶಂಕರಾಭರಣ ತಾಳ, ಆದಿ

ಪಂಚಾಲೆ ನುಡಿಗೆ ವೀ । ರಂಚೀಪಿತಾನು ಮೆಚ್ಚಿ ! ವಂಚನಿ
ಲ್ಲದಲೆ ನುಡಿವಾನು ಕೋ॥ಲೆ ॥ ವಂಚನಿಲ್ಲದಲೆ ನುಡಿವ ಶುಭ
ವಾಕ್ಯವಾ । ಮುಂಚೆ ಪೇಳುವೆನು ಕೇಳೀರೆಲ್ಲ ಕೋ॥ಲೆ
॥ ೧ ॥ ಏನನ್ನಾಲೆ ದ್ರೌಪದಿ ಈ ನಾರೀಯಾರಾ ಮುಂಯ್ಯಾ
ಕಾಣಿಸಿತವ್ವಾ ನಿಮ್ಮ ನಿಂದೂ ಕೋ॥ಲೆ॥ ಕಾಣೀಸಿತವ್ವಾನಿಮ್ಮ
ನಿಂದೂ ಮರಳೆ ಶ್ರೀ । ಶ್ರೀನಿವಾಸಾನೂ ಆಡೂತಿಹ ಕೋ॥ಲೆ

|| ೨ || ನೀನು ನಿನ ಗಂಡಾ ನಿಲ್ಲ | ದಾ ನೀರಲಾರಿನವ್ವಾ |
ಪ್ರಾಣೇಗೆಲ್ಲೀ ಜಡವಲ್ಲಿ ಕೋಲೆ || ಪ್ರಾಣೇಗಾಳಲ್ಲೀ ಜಡ
ದಲ್ಲಿ ಹೇತಂಗಿ ಇಗೇ | ನಂದೆನುವಚಾರಲ್ಲವವ್ವಾ ಕೋಲೆ
|| ೩ || ಶಂಭು ಸೂರೇಶ ಸೋವಾ | ಕೇಂಬೊರೆಲ್ಲಾರೆನ್ನಲ್ಲಿ
ಡಂಭಾಕಭಕುತೀ ಮಾಡುವಾವು ಕೋಲೆ || ಡಂಭಾಕಭಕು
ತೀ ಮಾಡೋರು | ನಿನ ಗಂಡಾ ನೀನು | ನಂಬೀಮಾಡು
ಏರೆ ನಿಜಭಕ್ತೀಕೋಲೆ || ೪ || ಪ್ರಥಮಂಗಾರೆಂಬೊ ನಾಮಾ |
ಇತರಾರಿಗಿಲ್ಲಾ ಕಂಡ್ಯಾ | ದಿತಿಜಾರೀಗಳೋಳೂ ನೋಡಲ್ಕೆ
ಕೋಲೆ || ದಿತಿಜಾರೀಗಳೊಳು ನೋಡಲ್ಕೆ ಈ ಮಾತು
ಮಾರತ ಗೆವಪ್ಪುವಮೂ ಶೃತಿಶಿದ್ಧಾ ಕೋಲೆ ||೫|| ಶುದ್ಧಾ
ಭಾಗವತಾರನ್ನಾ | ಶುದ್ಧಾಭಾಗೀರ್ಥಿ ಉದಕಾ | ಶುದ್ಧಾ
ಹರೀತೀರ್ಥಾ ಹರಿದೀನ ಕೋಲೆ || ಶುದ್ಧಾ ಹರಿತೀರ್ಥ
ಹರಿ ದೀನ ನಿಮ್ಮನಕ್ಕೆ | ಬುದ್ಧೀಪೂರ್ವಕದೀ ಬಂದೆ ನೀಗಾ
ಕೋಲೆ || ೬ || ದೇವರೆಂದು ಲೋಕಕ್ಕೆ ನೀವೇ ತಿಳಿಸೀದಿ
ರೆನ್ನ | ಈ ವೀಬುಧರೊಳು ಒಬ್ಬರಿಲ್ಲಾ ಕೋಲೆ || ಈ ವೀಬು
ಧರೊಳು ಒಬ್ಬರಿಲ್ಲ ಹೇತಂಗಿ | ಈ ಉಪಕಾರಾ ಕೊಳಗಾದೆ
ಕೋಲೆ || ೭ || ದಾನವಾದ್ರೀ ಭೀಧೂರ | ಪ್ರಾಣೇಶ ವಿಠ್ಠ
ಲೀರ | ಮಾನೀನಿ ಯೊಡನೆ ಹಿತ ಮಾತು ಕೋಲೆ ||
ಮಾನೀನಿಯೊಡನೆ ಹಿತಾಮಾತು ಗಳಾಡೂತ | ಮಾನಾ
ವಾರಂತ ಮೋಹೀಸೂವ ಕೋಲೆ || ೮ || ೩೬೮ ||

॥ ಪಾಂಡವ ಕೃತಶ್ರೀಕೃಷ್ಣ ಮರ್ಯಾದಾ ॥

ಶ್ರೀ ಗುರುಭ್ಯೋನಮಃ ಪದ. ರಾಗ. ಶಂಕರಾಭರಣ ತಾಳ ಝಂಪೆ

ಹರಿದಾಸರೆಲ್ಲರೀ ಕಥಿ ಕೇಳೀ । ಹರಿಪುರದೊಳು ಬಹುಕಾಲ ಬಾಳೀ । ಹರಿದಾಸರೆಲ್ಲರೀ ಕಥಿ ಕೇಳಿ ॥ ಪಲ್ಲ ॥ ಪಾಂಡೂವರೆಲ್ಲ ತಮ್ಮ ಹೆಂಡಾರಿಂದೊಡಗೂಡಿ ॥ ಅಂಡಜವಹನಗೆ । ಮುಂಡೇಬಾಗೀ ॥ ೧ ॥ ವಂದೀಸಿ ಉಪೂಗಾರ । ತಂದೂ ಕೊಡುವರಾಗ ॥ ಬಂದಾರಾಪುರಿಗಾ। ನಂದದಿಂದಾ ॥ ೨ ॥ ರುಕ್ಮೀಣೀದೇವಿಗೆ । ಮಿಕ್ಕಾದೇಳು ಮಂಡೀಗೆ ॥ ತಕ್ಕ ತಕ್ಕವೀವಾರೂ । ಚೊಕ್ಕ ಶೀರಿಯೂ ॥ ೩ ॥ ಹದಿನಾರು ಸಾವೀರ । ಸುದತೇರಿ ಗಂಬಾರ । ವದಿಗೀಸಿ ಕೊಡುವರು ॥ ಮುದದಿಂದಾ ॥ ೪ ॥ ಸಾಂಬೀಯರಾರಾ ಮಕ್ಕಳ । ನಾರಾಯಣ ನೆಂಬೋರ । ಪಾರಾವ ಂದೀಗೀವಾರು । ಚಾರುವಸನಾ ॥ ೫ ॥ ದುರಿತಾರಿ ಕೂಡ ಬಂದ । ಸರೂವ ವಿಪ್ರ್ಯಾಸರೀಗೆ । ತ್ವರದಿಂದೀವಾರು ಪರಿ ಪರೀ ಚೈಲಾ ॥ ೬ ॥ ಪಾಂಡೂವರಿಂದ ಬೀಳು । ಕೊಂಡು ಪ್ರಾಣೇ ವಿಠ್ಠಲಾ । ಶಂಡಾಪುರದಿಂದ । ತೆರಳಿದನೂ ॥ ೭ ॥ ೩೭ ॥ ಶ್ರೀ ಮಧ್ವೇಶಕೃಷ್ಣಾರ್ಪಣ ಮಸ್ತು ॥

॥ ಶ್ರೀಕೃಷ್ಣದ್ವಾರಕಾ ಪ್ರವೇಶ, ಮಸ್ತು ॥

ಫಲಶ್ರುತಿ ಮಂಗಳ

ಶ್ರೀಗುರುಭ್ಯೋನಮಃ ಪದ. ರಾಗ. ಸಾವೇರಿತಾಳ ಆದಿ.

ಯೇಸೂ ಭಾರೀಗೆ ಇದೇ ಕೇಳೀರೊ । ನಿಮ್ಮಾ । ಯಾಸಾ ಭವರೋಗಾವು ಕೀಳಿರೋ ॥ ಪಲ್ಲ ॥ ದ್ವಾರಕಾ ಪುರ ಹರಿ

ಶೀರಿದಾನಂತರಾದಿ | ನಾರೀಜಾ ಸಾನ ಮುಖ್ಯದಿ ವಿಜಾ
ದೂ || ನಾರಾಯಣಾ ನಂಘ್ರಿಗೆ ಭಾರೀ ಭಾರೇ ವಂದಿಸಿ ||
ಸಾರೀದರು ತಮ್ಮಯಾ ನಿಜಪೂರಾ || ೧ || ಗೆದ್ದನೇ ರುಗ್ಮೀ
ಣಿ | ಗೆದ್ದನೆಲೆ ಸತ್ಯಭಾಂವಿ | ಗೆದ್ದನೆ ಜಾಂಬವತೀ
ನೀಲಾಭದ್ರೀ|| ಗೆದ್ದ್ಯಾ ಲಕ್ಷ್ಮಣ ಮಿತ್ರಿ| ಗೆದ್ದ್ಯಾ ಕಾಳಿಂದೇದು
ಭೂ| ಮೋದ್ಧಾರ ನಗುತೀಹಾವಿನಯದಿಂದ || ೨ || ಉಡ
ಲುಂಟು ಉಣಲುಂಟು | ಕೊಡಲುಂಟು ಕೊಳಲುಂಟು |
ದೃಡಗಾತ್ರ ಪ್ರಜಾವೃದ್ಧೀಧನ ವೃದ್ಧೀ || ಪೊಡವೀಯೊಳು
ಸತ್ಕೀರ್ತೀ | ಪಡದು ಜೀವೀಸುವಾರು | ಕಡಲ ಶೈನನಾಕಥೆ
ಕೇಳಲೂ || ೩ || ಏಸೊ ಕರಟೀಯುಲಿಕಿ | ನಾಶ ಪುರದೊ
ಳಗೆ | ವಾಸವಾಗಬ್ಯಾಡಿ ರೊ ನರರಾಗೀ || ವ್ಯಾಸಾರದಲಿ
ಪ್ರತಿ | ವಾಸಾರದಲ್ಲಿ ಶ್ರೀ ಪ್ರಾ | ಣೇಶಪತಲಾನ ಕಥೆ ಕೇಳಿ
ರೋ || ೪ || ಮಂಗಳ ಮೀನಕೂರ್ಮ ಮಂಗಳ ಕ್ರೋಡ
ನರಸಿಂಹಾ ಮಂಗಳ ವಟುರಾಮಾ ರಾಮ ಕೃಷ್ಣಾ ||
ಮಂಗಳ ಬುದ್ಧ ಧುರ್ಯವಾಹ ಕಲಿವೀದಾರಣಾ || ಮಂಗಳ
ಶ್ರೀ ಪ್ರಾಣೇಶವಿಠಲಾ || ೫ || ೩೮೦ || ಶ್ರೀ ಮಧ್ವೇಶಕೃ
ಷ್ಣಾರ್ಪಣ ಮಸ್ತು||

ದಾಸಾರ್ಯರು ಈ ಮುಯ್ಯದ ಪದವನ್ನು ಸ್ವಹಸ್ತ ಲೇಖನದಿಂದ ಶ್ರೀದೇವರಿಗೆ ಅರ್ಪಿಸಿದ್ದು

ಅಂತು ಪದ (೩೮೦) ವಿಭವ ನಾಮ ಸಂವತ್ಸರವಸಂತ ಋತು ಚೈತ್ರಬ || ೪ ಗುರುವಾಸರದಲ್ಲಿ ಶ್ರೀ ವರದೇಂದ್ರ ರಾಯರ ಸಮೀಪ ಮಠದೊಳಗೆ ಶ್ರೀ ಮಜ್ಜಗನ್ನಾಥದಾಸ ರಾಯರ ಪಾದಾಂಬುರು ಹಾಳಿಯನಿಸುವನಿಂದ ಈ ಮು ನ್ನೂರಾ ಯಾಂಭತ್ತು ಪದ್ಯ ಉಳ್ಳಂಥ ಮುಯ್ಯದ ಕಥೆ ಪದ ವನ್ನು ಶ್ರೀಗಳವರಂತರ್ಯಾಮಿ ಶ್ರೀ ಮಧ್ವನುಮ ಭೀಮ ಮಧ್ವಾಂತರ್ಯಾಮಿ ಶ್ರೀ ರಾಮಕೃಷ್ಣ ವೇದವ್ಯಾಸರು ಅನು ಗ್ರಹಪೂರ್ಣಮಾಡಿ ಬರದು ಬರಸಿದ್ದಾರೆಂಬ ಕಾವ್ಯವು ಶ್ರೀ ಮಧ್ವೇಶಾರ್ಪಣ ಮಸ್ತು || ಶಕೆ (೧೭೩೦)

